# ಪರಿಷ್ಕೃತ ಮಾಸ್ಟರ್ ಪ್ಲಾನ್ 2031
# ಕುರಿತು ಬಿಡಿಎಗೆ ಆಕ್ಷೇಪಣೆಗಳ ಸಲ್ಲಿಕೆ

## ಕೆಂಪೇಗೌಡರ ಕನಸಿನ ಬೆಂಗಳೂರನ್ನು ಮರಳಿ ಪಡೆಯಲು

**#ReclaimingBengaluru #NammaBengaluru**






## ರಾಜೀವ್ ಚಂದ್ರಶೇಖರ್

**ರಾಜ್ಯಸಭಾ ಸದಸ್ಯರು**


**23.01.2018**

# BANGALORE DEVELOPMENT AUTHORITY

T. Chowdaiah Road, Kumara Park West, Bangalore - 560 020

No.: BDA/TPM/RMP-2031/1535//2017-18 Date: 24.11.2017

## PUBLIC NOTICE

### PUBLICATION OF PROVISIONAL REVISED MASTER PLAN-2031 (RMP-2031) FOR BENGALURU LOCAL PLANNING AREA UNDER SECTION 13(1) OF THE KARNATAKA TOWN AND COUNTRY PLANNING ACT, 1961

Revised Master Plan-2031 for Bengaluru Local Planning Area as required under Section 13(D) of the Karnataka Town and Country Planning Act, 1961, is provisionally approved by the Government vide G.O. No.: Na Aa Ee:516:BEM Aa Se Bengaluru, dated 22.11.2017 and a copy of **Master Plan is available for inspection at Banashankari 2nd Stage, BDA Commercial Complex, 1st Floor, Bengaluru during office hours from 25.11.2017 to 23.01.2018.**

Suggestions/Comments if any from the general public in respect of Revised Master Plan-2031, may be submitted **within 60 days** from the date of publication of this notice by muddam or by Regd. Post to **Town Planner Member, Room No.210, 2nd Floor, BDA Commercial Complex, Banashankari 2nd Stage, Bengaluru-70** or through e-mail **Suggestions.rmp2031@gmail.com** Format for suggestion/objection may be downloaded from BDA website **www.bdabangalore.org** Suggestions/ objections received after objection period will not be considered.

**Sd/- Commissioner, BDA, Bengaluru**

# ಪೀಠಿಕೆ

ಬೆಂಗಳೂರು ಜಿಲ್ಲೆಯನ್ನು ಪ್ರತಿನಿಧಿಸುವ ಸಂಸದನಾಗಿ ನನಗೆ ಜವಾಬ್ದಾರಿ ದೊರೆತ ದಿನದಿಂದಲೂ ನಾನು ಬೆಂಗಳೂರಿನ ತ್ವರಿತ ಬೆಳವಣಿಗೆಗೆ ಪೂರಕವಾಗಿ ಜಾರಿಗೆ ತರಬೇಕಾದ ಸಮಗ್ರ ಯೋಜನೆಯ ಬಗ್ಗೆ ಸಲಹೆ ನೀಡುತ್ತ, ಆಗ್ರಹಿಸುತ್ತ ಮತ್ತು ಕೊನೆಗೆ ಒತ್ತಾಯಿಸುತ್ತ ಬಂದಿದ್ದೇನೆ. ಇಂತಹದ್ದೊಂದು ಯೋಜನೆ ಏಕೆ ಬೇಕು ಎಂಬುದಕ್ಕೆ ನಾನು ಮೊದಲ ಬಾರಿ ಈ ಬಗ್ಗೆ ೨೦೦೯ರಲ್ಲಿ ನೀಡಿದ ಕಾರಣಗಳೇ ಈಗಲೂ ಅನ್ವಯಿಸುತ್ತವೆ. ಯೋಜನೆಯಿಲ್ಲದೆ ನಡೆಯುವ ಬೆಳವಣಿಗೆ ಎಂಬುದು ನಾನಾ ಸಮಸ್ಯೆಗಳ ಆಗರ. ನಗರದ ಅಧ್ವಾನಗಳು ಕ್ರಮೇಣ ಆಡಳಿತಾತ್ಮಕ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುವುದಕ್ಕೆ ವೇದಿಕೆ ಒದಗಿಸುತ್ತವೆ. ಅದು ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತದ ಒಂದು ಸಂಸ್ಕೃತಿಯನ್ನೇ ಹುಟ್ಟುಹಾಕುತ್ತದೆ.

ಈ ಸರ್ಕಾರ ೨೦೧೩ರಲ್ಲಿ ಅಧಿಕಾರಕ್ಕೆ ಬಂತು. ಆದರೆ ಕಳೆದ ಐದು ವರ್ಷಗಳಲ್ಲಿ ಇದು ಬೆಂಗಳೂರಿಗಾಗಿ ಯಾವುದೇ ಯೋಜನೆಯಿಲ್ಲದೆ, ಅದರ ಅಗತ್ಯ ಸಾಕಷ್ಟಿದ್ದರೂ, ಈ ನಗರವನ್ನು ಐದು ವರ್ಷ ಆಳಿತು. ಬೆಂಗಳೂರಿಗಾಗಿ ಬಿಬಿಎಂಪಿ ಪ್ರತಿ ವರ್ಷ ಖರ್ಚುಮಾಡುವ ಸುಮಾರು ೯೦೦೦ ಕೋಟಿ ರೂಪಾಯಿ ಮತ್ತು ವಿವಿಧ ಸರ್ಕಾರಿ ಏಜೆನ್ಸಿಗಳು ನಾನಾ 'ಯೋಜನೆಗಳ' ಹೆಸರಿನಲ್ಲಿ ಖರ್ಚು ಮಾಡುವ ಅಪಾರ ಹಣದಿಂದ ಬೆಂಗಳೂರು ಎದುರಿಸುತ್ತಿರುವ ಯಾವುದೇ ಬೃಹತ್ ಸಮಸ್ಯೆಗೂ ಸರಿಯಾದ ಪರಿಹಾರ ದೊರೆತಿಲ್ಲ. ಸಾರಿಗೆ, ನೀರಿನ ಮೂಲಗಳು, ಘನ ತ್ಯಾಜ್ಯ ನಿರ್ವಹಣೆ, ನೀರು ಮತ್ತು ಒಳಚರಂಡಿ, ಬಡವರ ವಸತಿ, ಆರೋಗ್ಯ ಮತ್ತು ಶಿಕ್ಷಣ ಇತ್ಯಾದಿ ಯಾವುದೇ ಗಂಭೀರ ಸಮಸ್ಯೆಗಳೂ ಈ ಹಣದಿಂದ ಪರಿಹಾರವಾಗಲಿಲ್ಲ. ಇದಕ್ಕೆ ಸಾಕ್ಷ್ಯವನ್ನು ಎಲ್ಲೂ ಹುಡುಕಬೇಕಿಲ್ಲ. ಕಳೆದ ಐದು ವರ್ಷಗಳಿಂದ ಖರ್ಚು ಮಾಡಿದ ಸುಮಾರು ೫೦೦೦೦ ಕೋಟಿ ರೂ.ಗಿಂತ ಹೆಚ್ಚು ಹಣವು ಬೆಂಗಳೂರಿನ ನಾಗರಿಕರು ೨೦೧೩ರಿಂದ ಎದುರಿಸುತ್ತಿರುವ ಯಾವ ಸಮಸ್ಯೆಯನ್ನೂ ಬಗೆಹರಿಸಲಿಲ್ಲ ಅಥವಾ ಅವರ ಸ್ಥಿತಿಯನ್ನು ಯಾವ ರೀತಿಯಲ್ಲೂ ಸುಧಾರಿಸಲಿಲ್ಲ. ಅದಕ್ಕಿಂತ ಬೇಸರದ ಸಂಗತಿ ಏನೆಂದರೆ, ಸಾಕಷ್ಟು ಪ್ರದೇಶಗಳಲ್ಲಿ ಆ ಸಮಸ್ಯೆಗಳು ಇನ್ನಷ್ಟು ಹೆಚ್ಚಿವೆ. ಅದರೊಂದಿಗೆ ಜನರ, ಅದರಲ್ಲೂ ವಿಶೇಷವಾಗಿ ಬಡ ಜನರ ಬದುಕು ಇನ್ನಷ್ಟು ದುಸ್ತರವಾಗಿದೆ.

ಸೂಕ್ತ ಯೋಜನೆಯೇ ಇಲ್ಲದ, ಹೆಚ್ಚಿನ ಸಲ ಭ್ರಷ್ಟಾಚಾರದಿಂದ ಕೂಡಿದ ಹಾಗೂ ಜನರಿಂದ ವಿರೋಧ ಎದುರಿಸುತ್ತಿರುವ ಅಧ್ವಾನಗಳ ಅಭಿವೃದ್ಧಿಯನ್ನು ನಾಗರೀಕರ ಸಹಕಾರದೊಂದಿಗೆ ಹೆಚ್ಚು ಯೋಜನಾಬದ್ಧವಾದ, ಪಾರದರ್ಶಕ ಅಭಿವೃದ್ಧಿಯನ್ನಾಗಿ ಪರಿವರ್ತಿಸುವ ತುರ್ತು ಅಗತ್ಯ ನಮ್ಮ ಬೆಂಗಳೂರಿಗಿದೆ. ಹೀಗಾಗಿ ಇದಕ್ಕೊಂದು ಯೋಜನೆ ರೂಪಿಸುವುದು ಸ್ವಾಗತಾರ್ಹವೇ. ಆದರೆ, ಬಿಡಿಎ ರೂಪಿಸಿರುವ ಪ್ರಸ್ತುತ ಆರ್‌ಎಂಪಿ೨೦೩೧ ಸ್ವೀಕಾರಾರ್ಹವಲ್ಲ. ಏಕೆಂದರೆ ಇದು ಕಾನೂನಾತ್ಮಕವಾಗಿಯೂ ಮತ್ತು ತನ್ನ ಗುರಿಯನ್ನು ತಲುಪುವ ದಿಸೆಯಲ್ಲೂ ಸಾಕಷ್ಟು ಕೊರತೆಗಳಿಂದ ಬಳಲುತ್ತಿದೆ.

೧. **ಆರ್‌ಎಂಪಿ ೨೦೩೧ಕ್ಕೆ ಸಂಬಂಧಿಸಿದಂತೆ ಮಹಾನಗರ ಯೋಜನೆಯಲ್ಲಿ ಸಾಂವಿಧಾನಿಕ ಅಧಿಕಾರ ಹೊಂದಿರುವ ಎಂಪಿಸಿಯೇ ಏಕೈಕ ಸಂಸ್ಥೆ.**

   ಆರ್‌ಎಂಪಿ ೨೦೩೧ ಎಂಬುದು ನಗರದ ಮುಂದಿನ ೧೫ ವರ್ಷಗಳ ಬೆಳವಣಿಗೆಯನ್ನು ನಿರ್ದೇಶಿಸುವ ಹಾಗೂ ಅದಕ್ಕೊಂದು ವಿಸ್ತಾರವಾದ ಚೌಕಟ್ಟು ಒದಗಿಸುವ ಸಮಗ್ರ ಯೋಜನಾ ದಾಖಲೆಯಾಗಬೇಕಿತ್ತು. ಸಂವಿಧಾನದ ೭೪ನೇ ತಿದ್ದುಪಡಿಯು ಈ ಬಗ್ಗೆ ಹೇಳುತ್ತದೆ ಮತ್ತು ಈ ಕೆಲಸ ಮಾಡುವ ಅಧಿಕಾರವನ್ನು ಎಂಪಿಸಿಗೆ ನೀಡುತ್ತದೆ. ನಗರ ಸ್ಥಳೀಯ ಸಂಸ್ಥೆಗಳು ಹಾಗೂ ನಗರಾಡಳಿತಗಳನ್ನು ಸೃಷ್ಟಿಸಿದ ಹಾಗೂ ಅವುಗಳಿಗೆ ಅಧಿಕಾರ ನೀಡಿದ ತಿದ್ದುಪಡಿಯೇ ಸಂವಿಧಾನದ ೭೪ನೇ ತಿದ್ದುಪಡಿ.

ಹಣಕಾಸು ಅವ್ಯವಹಾರಗಳ ಹಾಗೂ ಭೂ ಅಕ್ರಮಗಳ ಸುದೀರ್ಘ ಇತಿಹಾಸ ಹೊಂದಿರುವ ಬಿಡಿಎಗೆ ಈ ಕೆಲಸ ಮಾಡುವ ಅಧಿಕಾರವಾಗಲೀ, ಇದಕ್ಕೆ ಅಗತ್ಯವಿರುವ ವಿಶ್ವಾಸಾರ್ಹತೆಯಾಗಲೀ ಇಲ್ಲ. ಇದೊಂದು ಅಪ್ಪಟ ಅಪಾರದರ್ಶಕ ಸಂಸ್ಥೆ. ಉಕ್ಕಿನ ಮೇಲ್ಸೇತುವೆ ಯೋಜನೆಯನ್ನು ಪಾರಿಸರಿಕ ಒಪ್ಪಿಗೆಯಿಲ್ಲದೆ ಮತ್ತು ಸಾರ್ವಜನಿಕರ ಅಭಿಪ್ರಾಯಗಳನ್ನು ಕೂಡ ತಿರುಚಿ ಜಾರಿಗೊಳಿಸಲು ಬಿಡಿಎ ಹೋದಾಗಲೇ ಇದು ಇನ್ನಷ್ಟು ನಿಚ್ಚಳವಾಗಿದೆ. ಉಕ್ಕಿನ ಮೇಲ್ಸೇತುವೆ ಯೋಜನೆಗೆ ತರಾತುರಿಯಲ್ಲಿ ಸಾರ್ವಜನಿಕ ಅಭಿಪ್ರಯಗಳನ್ನು ಸಂಗ್ರಹಿಸಿ, ಅವುಗಳನ್ನು ತಿರುಚಿ, ಜನರಿಗೆ ಅತ್ಯಲ್ಪ ಅಂಕಿಅಂಶ ಹಾಗೂ ಮಾಹಿತಿಗಳು ಸಿಗುವಂತೆ ಮಾಡಿ ಗುತ್ತಿಗೆಗಳನ್ನು ಕೂಡ ನೀಡಲಾಗಿತ್ತು. ಕೇವಲ ನ್ಯಾಯಾಂಗದ ಮಧ್ಯಪ್ರವೇಶದಿಂದ ಮಾತ್ರ ಬಿಡಿಎಯ ಅಕ್ರಮಗಳನ್ನು ಬಯಲಿಗೆಳೆಯಲು ಸಾಧ್ಯವಾಯಿತು. ಬಿಡಿಎ ಹಾಗೂ ಇತರ ಸಂಸ್ಥೆಗಳು ಪ್ರಸ್ತುತ ಜಾರಿಗೊಳಿಸುತ್ತಿರುವ ನಾನಾ ಯೋಜನೆಗಳ ಅಗತ್ಯ, ಖರ್ಚುವೆಚ್ಚ ಹಾಗೂ ಹಣದ ಮೂಲಕ್ಕೆ ಸಂಬಂಧಿಸಿದಂತೆ ಅತ್ಯಲ್ಪ ಪಾರದರ್ಶಕತೆಯಿದೆ ಹಾಗೂ ಜನರಿಗೆ ಈ ಬಗ್ಗೆ ಅತಿ ಕಡಿಮೆ ಮಾಹಿತಿ ಲಭ್ಯವಿದೆ. ಬಿಡಿಎ ಜಾರಿಗೊಳಿಸುವ ಹೆಚ್ಚಿನ ಎಲ್ಲಾ ಯೋಜನೆಗಳೂ 'ಚಿನ್ನದಲ್ಲಿ ಸುತ್ತಿದಂತಿರುತ್ತವೆ.' ಅವು ನಗರದ ಅಭಿವೃದ್ಧಿಗಾಗಿ ರೂಪಿಸುವ ಯೋಜನೆಗಳಾಗಿರದೆ ಬೇರೆ ಯಾವುದೋ ಉದ್ದೇಶಕ್ಕಾಗಿ ರೂಪಿಸಿದ ಯೋಜನೆಗಳಂತಿರುತ್ತವೆ ಎಂಬ ಸಾರ್ವಜನಿಕರ ಕಳವಳ ನಿಜವೇ ಆಗಿದೆ. ಸಂಸ್ಥೆಯ ಇಂತಹದ್ದೊಂದು ಇತಿಹಾಸವನ್ನು ಗಮನಿಸಿದರೆ ಇದು ಯಾವುದೇ ಯೋಜನೆಗಳನ್ನು ಜನರಿಗೆ ವಿಶ್ವಾಸ ಮೂಡುವ ರೀತಿಯಲ್ಲಿ ರೂಪಿಸಲು, ಜಾರಿಗೊಳಿಸಲು ಅಥವಾ ಜನರ ತೆರಿಗೆ ಹಣವನ್ನು ಖರ್ಚುಮಾಡುವ ಯಾವುದೇ ಕಾರ್ಯವನ್ನು ವಿಶ್ವಾಸಾರ್ಹವಾಗಿ ಮುನ್ನಡೆಸಲು ಸಾಧ್ಯವಿಲ್ಲ.

ಈ ಸರ್ಕಾರದ ಬಹುತೇಕ ಅವಧಿಯಲ್ಲಿ ಎಂಪಿಸಿಯ ರಚನೆಯೇ ಆಗಿರಲಿಲ್ಲ. ಇದನ್ನು ಕಾನೂನಾತ್ಮಕವಾಗಿ ಪ್ರಶ್ನಿಸಿದ ನಂತರವಷ್ಟೇ ಎಂಪಿಸಿ ರಚನೆ ಮಾಡಲಾಯಿತು. ಕರ್ನಾಟಕ ಸರ್ಕಾರವು ಎಂಪಿಸಿಯನ್ನು ರಚನೆ ಮಾಡಿದ ನಂತರವೂ ಇದರ ಅಧ್ಯಕ್ಷರಾದ ಮುಖ್ಯಮಂತ್ರಿಗಳು ಕಾಲಕಾಲಕ್ಕೆ ಸಭೆಗಳನ್ನು ನಡೆಸಲಿಲ್ಲ. ನಡೆಸಿದ ಸಭೆಗಳನ್ನೂ ಯಾವುದೇ ಅಜೆಂಡಾ ಇಲ್ಲದೆ ತರಾತುರಿಯಲ್ಲಿ ನಡೆಸಲಾಯಿತು. ಅವುಗಳಲ್ಲಿ ಮೆಟ್ರೋ ಪ್ರದೇಶದ ಹಾಗೂ ನಗರದ ಅಭಿವೃದ್ಧಿಗೆ ಅಗತ್ಯವಿರುವ ಯಾವುದೇ ಯೋಜನೆಗಳ ಬಗ್ಗೆಯೂ ಆಳವಾದ ಚರ್ಚೆಗಳು ನಡೆಯಲಿಲ್ಲ. ಅಷ್ಟೇ ಅಲ್ಲ, ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದು ಐದು ವರ್ಷಗಳ ನಂತರವೂ ಎಂಪಿಸಿಗೆ ನಗರ ಯೋಜನೆ ಹಾಗೂ ತಾಂತ್ರಿಕ ಸಲಹೆಗಾರರನ್ನು ನಾಮನಿರ್ದೇಶನ ಮಾಡಿಲ್ಲ.

ಹೀಗಾಗಿ ಪ್ರಸ್ತುತ ಆರ್‌ಎಂಪಿಯನ್ನು ಬದಲಿಸಲೇಬೇಕಿದೆ. ಅದಕ್ಕೂ ಮುನ್ನ ಎಂಪಿಸಿಯನ್ನು ಪುನರ್‌ರಚಿಸಿ, ಅದು ಕನಿಷ್ಠ ಆರು ತಿಂಗಳವರೆಗೆ ಪ್ರತಿ ತಿಂಗಳು ನಿಯಮಿತವಾಗಿ ಸಭೆಗಳನ್ನು ನಡೆಸಿ, ಅದರಲ್ಲಿ ನಾಗರೀಕ ಪ್ರತಿನಿಧಿಗಳೂ ಪಾಲ್ಗೊಳ್ಳುವಂತೆ ನೋಡಿಕೊಂಡು, ಅವರಿಂದ ಸಲಹೆಗಳನ್ನು ಪಡೆಯಬೇಕಿದೆ. ನಂತರ ಎಂಪಿಸಿಯು ಹೊಸ ಆರ್‌ಎಂಪಿ ರೂಪಿಸಬೇಕಿದೆ.

**೨. ಬಿಡಿಎ ರೂಪಿಸಿರುವ ಆರ್‌ಎಂಪಿಯು ಪ್ರಾದೇಶಿಕ ಮಾಸ್ಟರ್ ಪ್ಲಾನ್ ಸೋಗಿನಲ್ಲಿರುವ ಭೂಪರಿವರ್ತನೆ ಯೋಜನೆಯಷ್ಟೇ ಆಗಿದೆ. ಯೋಜನೆಗೆ ಸಂಬಂಧಿಸಿದ ಇತರ ಎಲ್ಲಾ ಸಂಗತಿಗಳೂ ಕೇವಲ ಸಲಹೆಗಳೇ ಹೊರತು ಸರ್ಕಾರದ ಬದ್ಧತೆಯನ್ನು ಹೊಂದಿಲ್ಲ.**

ನಾನು ಮೊದಲೇ ಹೇಳಿದಂತೆ, ನಾಗರೀಕರ ಹಿತಾಸಕ್ತಿಗಳು ಹಾಗೂ ಇತರ ವಾಣಿಜ್ಯ ಸಂಸ್ಥೆಗಳ ಹಿತಾಸಕ್ತಿಗಳನ್ನು ಒಳಗೊಂಡಿರುವ ಮಾಸ್ಟರ್ ಪ್ಲಾನ್ ರೂಪಿಸಲು ಬಿಡಿಎಗೆ ವಿಶ್ವಾಸಾರ್ಹತೆಯಾಗಲೀ ಪ್ರಾಮಾಣಿಕತೆಯಾಗಲೀ ಇಲ್ಲ. ಆರ್‌ಎಂಪಿಯ ಗಮನವು ಈ ನಗರದ ನಾಗರೀಕರು ಹಾಗೂ ನಿವಾಸಿಗಳ ಕುರಿತು ಇರಬೇಕಿತ್ತು.

ಬಿಡಿಎ ರೂಪಿಸಿರುವ ಪ್ರಸ್ತುತ ಆರ್‌ಎಂಪಿಯಲ್ಲಿ ಬೆಂಗಳೂರಿನಲ್ಲಿ ವಾಸಿಸುವ ಜನರಿಗೆ ಹಾಗೂ ಇಲ್ಲಿನ ಕುಟುಂಬಗಳಿಗೆ ಸಂಬಂಧಿಸಿದ ಹಲವಾರು ಸಂಗತಿಗಳಿವೆ. ಆದರೆ, ಮೂಲಭೂತ ಸೌಕರ್ಯ ಹಾಗೂ ಸೇವೆಗಳಿಗೆ ಸಂಬಂಧಿಸಿದ ಈ ಪ್ರಮುಖ ಯೋಜನೆಗಳನ್ನು ಪೂರ್ಣಗೊಳಿಸಲು ನಿಗದಿತ ಕಾಲಮಿತಿಯಾಗಲೀ, ಈ ಯೋಜನೆಗಳನ್ನು ಹೇಗೆ ರೂಪಿಸಲಾಗುತ್ತದೆ ಎಂಬ ಸ್ಪಷ್ಟತೆಯಾಗಲೀ ಅಥವಾ ಇವುಗಳಿಗೆ ಎಲ್ಲಿಂದ ಹಣ ತರಲಾಗುತ್ತದೆ ಎಂಬ ಮಾಹಿತಿಯಾಗಲೀ ಇಲ್ಲ. ಹಳೆ ಪೊಟ್ಟಣಕ್ಕೆ ಬಣ್ಣ ಬಳಿಯುವ ಯೋಚನೆಯಷ್ಟೇ ಇವುಗಳಲ್ಲಿ ಸ್ಪಷ್ಟವಾಗಿ ಎದ್ದುಕಾಣುತ್ತದೆ. ಅಂದರೆ, ಪ್ರಸ್ತುತ ವಾಣಿಜ್ಯೇತರ ಬಳಕೆಗಾಗಿ ಮೀಸಲಿಟ್ಟ ಹಾಗೂ ಹಸಿರೀಕರಣ ಕೈಗೊಳ್ಳಲು ಕಾಯ್ದಿಟ್ಟ ಭೂಮಿಯನ್ನು ಬೃಹತ್ ಪ್ರಮಾಣದ ವಾಣಿಜ್ಯ ಚಟುವಟಿಕೆಗಳಿಗೆ ನೀಡುವ ಉದ್ದೇಶ ಮಾತ್ರ ಈ ಯೋಜನೆಯಲ್ಲಿ ಸ್ಪಷ್ಟವಾಗಿ ಇದೆ.

ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ – ಈ ಕೆಳಗಿನ ಅಂಶಗಳಿಗೆ ಒಪ್ಪಿಗೆ ಪಡೆದು ಅಂತಿಮಗೊಳಿಸಿದ ನಂತರವಷ್ಟೇ ಭೂಪರಿವರ್ತನೆಗೆ ಆರ್‌ಎಂಪಿ ಅನುಮೋದನೆ ನೀಡಬೇಕು:

ಅ. ಅಭಿವೃದ್ಧಿ ಯೋಜನೆಗೆ ಮತ್ತು ಭೂ ಬಳಕೆಯ ವಿಧಾನವನ್ನು ಬದಲಿಸುವುದಕ್ಕೆ ನಿರ್ದಿಷ್ಟ ವಾರ್ಡ್‌ನ ಜನರ ಜೊತೆ ಸಂವಾದ ನಡೆಸಿ ಅವರ ಒಪ್ಪಿಗೆ ಪಡೆಯಬೇಕು.

ಬ. ಸರ್ಕಾರ/ ಬಿಬಿಎಂಪಿಯು ಮೂಲಸೌಕರ್ಯಗಳ ಅಗತ್ಯ ಪೂರೈಸುವ (ರಸ್ತೆ, ನೀರು, ಒಳಚರಂಡಿ, ವಿದ್ಯುತ್ ಇತ್ಯಾದಿ) ಯೋಜನೆಗಳನ್ನು ಅಂತಿಮಗೊಳಿಸುವುದಕ್ಕೂ ಮುನ್ನ ಹಾಗೂ ಅವುಗಳಿಗೆ ಹೂಡಿಕೆದಾರರನ್ನು ನಿರ್ಧರಿಸುವುದಕ್ಕೂ ಮುನ್ನ ಸಾರ್ವಜನಿಕರ ಜೊತೆ ಚರ್ಚಿಸಬೇಕು ಹಾಗೂ ಅವರ ಒಪ್ಪಿಗೆ ಪಡೆದಿರಬೇಕು.

ಕ. ಜನಸಂಖ್ಯೆ ಹೆಚ್ಚಿದಂತೆ ಅದಕ್ಕನುಗುಣವಾಗಿ ಅಭಿವೃದ್ಧಿ ಹೊಂದುವ ಹಾಗೂ ವಿಸ್ತರಿಸಲು ಸಾಧ್ಯವಿರುವ ಮೂಲಸೌಕರ್ಯ ಸಂಬಂಧಿ ಅಂಶಗಳನ್ನು ಆರ್‌ಎಂಪಿ ಒಳಗೊಂಡಿರಬೇಕು. ಇವುಗಳಿಗೆ ಅಗತ್ಯವಿರುವ ಆರ್ಥಿಕ ಹಾಗೂ ಹೂಡಿಕೆ ಸಂಬಂಧಿ ಯೋಜನೆಗಳ ಸಮಗ್ರ ವಿವರವು ಸಾರಾಂಶದ ರೂಪದಲ್ಲಿ ಸಂಕ್ಷಿಪ್ತವಾಗಿ ಜನರಿಗೆ ಲಭ್ಯವಿರಬೇಕು.

ಮೇಲಿನ ಯಾವುದೇ ಅಂಶಗಳನ್ನು ಪರಿಗಣಿಸದೆ ಭೂ ಪರಿವರ್ತನೆ ಮಾಡಿದರೆ ಏನಾಗುತ್ತದೆ ಎಂಬುದಕ್ಕೆ ಬೆಂಗಳೂರಿನ ಒಳಗೆ ಹಾಗೂ ಸುತ್ತಮುತ್ತ ನೀರು, ಒಳಚರಂಡಿ, ಕಸ ನಿರ್ವಹಣೆ ಹಾಗೂ ಕೊನೆಗೆ ರಸ್ತೆಯಂತಹ ಮೂಲಸೌಕರ್ಯ ಕೂಡ ಇಲ್ಲದೆ ಅಸ್ತಿತ್ವಕ್ಕೆ ಬಂದಿರುವ ಕಾಂಪ್ಲೆಕ್ಸ್‌ಗಳು/ ಟೌನ್‌ಶಿಪ್‌ಗಳೇ ಜ್ವಲಂತ ಸಾಕ್ಷ್ಯ. ಇಂತಹ ಯೋಜನಾಬದ್ಧವಲ್ಲದ ಅಭಿವೃದ್ಧಿಯ ದುಷ್ಪರಿಣಾಮಗಳು ಮೇಲ್ನೋಟಕ್ಕೆ ನಮ್ಮ ಕಣ್ಣಿಗೆ ಕಾಣದೆ ಇರಬಹುದು. ಆದರೆ ಇವು ವಾಸ್ತವದಲ್ಲಿ ಇರುವುದಂತೂ ನಿಜ, ಏಕೆಂದರೆ, ಗ್ಯಾಲನ್‌ಗಟ್ಟಲೆ ಒಳಚರಂಡಿ ನೀರು ಮತ್ತು ತ್ಯಾಜ್ಯವನ್ನು ಅಂತರ್ಜಲ ಅಥವಾ ಮೇಲ್ಮಟ್ಟದ ಜಲಮೂಲಗಳಿಗೆ ಪಂಪ್ ಮಾಡಲಾಗುತ್ತಿದೆ. ದಿನೇದಿನೇ ಅಂತರ್ಜಲ ಮಟ್ಟ ಕೆಳಗೆ ಹೋಗುತ್ತಿರುವ ಬೋರ್‌ವೆಲ್‌ಗಳಿಂದ ನೀರನ್ನು ಯಥೇಚ್ಛವಾಗಿ ಬಳಸಲಾಗುತ್ತಿದೆ. ಯಾವುದೇ ನಗರದ ಅಭಿವೃದ್ಧಿಗೆ ರೂಪಿಸುವ ದೀರ್ಘಾವಧಿ ಯೋಜನೆಯ ಭಾಗವಾಗಿ ಇಂತಹ ಅಂಶಗಳು ಇರಲು ಸಾಧ್ಯವೇ ಇಲ್ಲ.

ಸಮಗ್ರ ಯೋಜನೆಯಲ್ಲಿ ಏನೇನು ಇರಬೇಕು ಎಂಬ ಬಗ್ಗೆ ಪ್ಲಾನ್‌ಬೆಂಗಳೂರು೨೦೨೦ – ಇದು ೨೦೧೦ರಲ್ಲಿ ರೂಪಿಸಿದ ಯೋಜನಾ ದಾಖಲೆ – ದಾಖಲೆಯನ್ನು **'ಅಡಕ ಏ'** ಜತೆ ಲಗತ್ತಿಸಲಾಗಿದೆ. ಒಂದು ನಗರದ ಮೂಲಸೌಕರ್ಯ ಯೋಜನೆಯಲ್ಲಿ ಕಡ್ಡಾಯವಾಗಿ ಇರಲೇಬೇಕಾದ ಅಂಶಗಳು ಅದರಲ್ಲಿವೆ. ಆ ದಾಖಲೆಯ ಮುನ್ನುಡಿಯಲ್ಲಿರುವ ಅಂಶಗಳ ಬಗ್ಗೆ ತಮ್ಮ ಗಮನ ಸೆಳೆಯುತ್ತೇನೆ.

**೬. ಜನರ ಸಹಭಾಗಿತ್ವ, ಸರ್ಕಾರಿ ಸಂಸ್ಥೆಗಳು ಹಾಗೂ ಅಧಿಕಾರಿಗಳ ವಿಶ್ವಾಸಾರ್ಹತೆ, ಖರ್ಚುವೆಚ್ಚ ಮತ್ತು ಗುತ್ತಿಗೆಗೆ ಸಂಬಂಧಿಸಿದಂತೆ ಪಾರದರ್ಶಕತೆಯನ್ನು ಕಡ್ಡಾಯಗೊಳಿಸುವ ಹೊಸ ಕಾಯ್ದೆಯೊಂದು ಬೆಂಗಳೂರಿಗೆ ಬೇಕಿದೆ. ಇದಕ್ಕಾಗಿ ಕೆಟಿಸಿಪಿ ಕಾಯ್ದೆಗೆ ತಿದ್ದುಪಡಿ ತರುವ ಅಥವಾ ಆ ಕಾಯ್ದೆಯನ್ನೇ ರದ್ದುಗೊಳಿಸುವ ಅಗತ್ಯವಿದೆ.**

ಸಮಸ್ಯೆ ಇರುವುದು ಎಲ್ಲಿ ಅಂದರೆ, ೧೯೯೨ರಲ್ಲಿ ಎಂಪಿಸಿ ಮತ್ತು ಡಿಪಿಸಿಗಳಿಗೆ ಸಾಂವಿಧಾನಿಕ ಸ್ಥಾನಮಾನ ನೀಡಿದಾಗ ಅದಕ್ಕೂ ಮುನ್ನ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆ-೧೯೬೧ರಡಿ ಮಾಸ್ಟರ್ ಪ್ಲಾನ್‌ಗಳನ್ನು ರೂಪಿಸುವ ಯೋಜನಾಧಿಕಾರಿಗಳು ಎಂದು ಯಾರಿಗೆ ಅಧಿಕಾರ ನೀಡಲಾಗಿತ್ತೋ ಅವರ ಅಧಿಕಾರವನ್ನು ಹಿಂಪಡೆಯಲಿಲ್ಲ ಅಥವಾ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆಗೆ ತಿದ್ದುಪಡಿ ಮಾಡಲೂ ಇಲ್ಲ. ಸಂವಿಧಾನದ ೭೪ನೇ ತಿದ್ದುಪಡಿಯ ೨೪೩ಝಡ್‌ಎಫ್ ಪರಿಚ್ಛೇದವು 'ಸಂವಿಧಾನದ ೭೪ನೇ ತಿದ್ದುಪಡಿಗೆ ಅನುಗುಣವಾಗಿ ಇಲ್ಲದ ಯಾವುದೇ ಅಥವಾ ಎಲ್ಲಾ ಕಾನೂನುಬದ್ಧ ಸಂಗತಿಗಳು ಸಂವಿಧಾನದ ೭೪ನೇ ತಿದ್ದುಪಡಿಯು ಜಾರಿಗೆ ಬಂದ ಒಂದು ವರ್ಷದ ಕೊನೆಗೆ, ಅಂದರೆ, ೧೯೯೪ರಲ್ಲಿ, ರದ್ದಾಗುತ್ತವೆ' ಎಂದು ಸ್ಪಷ್ಟವಾಗಿ ಹೇಳುತ್ತದೆ.

ಬೆಂಗಳೂರಿಗೆ ಸಂಬಂಧಿಸಿದಂತೆ ಬಿಡಿಎ ಬಳಿಯಿರುವ ಯೋಜನಾಧಿಕಾರವನ್ನು ಹಿಂಪಡೆದು, ಅವುಗಳನ್ನು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿಗೆ ವರ್ಗಾಯಿಸಲು ಹಾಗೂ ಇತರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಯೋಜನಾ ಸಮಿತಿಗಳಿಗೆ ಅಧಿಕಾರ ವರ್ಗಾಯಿಸಲು ಕೆಟಿಸಿಪಿ ಕಾಯ್ದೆಯನ್ನು ತಿದ್ದುಪಡಿ ಮಾಡಿಲ್ಲ. ಹಾಗಾಗಿ, ಸಂವಿಧಾನದ ೭೪ನೇ ತಿದ್ದುಪಡಿಯ ೨೪೩ಝಡ್‌ಎಫ್ ಪರಿಚ್ಛೇದದ ಅನ್ವಯ ಬಿಡಿಎ ಬಳಿಯಿರುವ ಬೆಂಗಳೂರು ಮೆಟ್ರೋಪಾಲಿಟನ್ ಏರಿಯಾ (ಬಿಎಂಎ) ಯೋಜನಾಧಿಕಾರ ತನ್ನಿಂತಾನೇ ರದ್ದಾಗಿದೆ ಮತ್ತು ಆ ಅಧಿಕಾರವನ್ನು ಬಿಡಿಎ ಇನ್ನೂ ಚಲಾಯಿಸುತ್ತಿದ್ದರೆ ಅದು ಅಸಾಂವಿಧಾನಿಕವಾಗುತ್ತದೆ. ಪ್ರಸ್ತುತ ಯೋಜನಾಧಿಕಾರವು ಕೇವಲ ಎಂಪಿಸಿಗೆ ಮಾತ್ರ ಇದೆ. ಬಿಎಂಪಿಸಿ ಸಭೆ ನಡೆಸಲು ಕರ್ನಾಟಕ ಸರ್ಕಾರ ಹಿಂದೇಟು ಹಾಕುತ್ತಿರುವುದಕ್ಕೆ ಕಾರಣ ಎಲ್ಲರಿಗೂ ಅರ್ಥವಾಗುತ್ತದೆ. ಇದರಲ್ಲಿ ಎಲ್ಲಾ ಪಕ್ಷಗಳ ಸಂಸದರು, ಶಾಸಕರು ಹಾಗೂ ಕಾರ್ಪೋರೇಟರ್‌ಗಳಿದ್ದಾರೆ. ಆದರೆ, ಇದರಲ್ಲಿ ನಾಮನಿರ್ದೇಶಿತ ತಜ್ಞರು ಇರಬೇಕಿತ್ತು. ಅದರಿಂದ ಯೋಜನೆಯನ್ನು ರೂಪಿಸುವ ಪ್ರಕ್ರಿಯೆ ಪಾರದರ್ಶಕವಾಗುತ್ತಿತ್ತು ಮತ್ತು ಬಿಡಿಎ ಮೂಲಕ ಜಾರಿಗೊಳಿಸುವುದಕ್ಕಿಂತ ಸರಿಯಾದ ರೀತಿಯಲ್ಲಿರುತ್ತಿತ್ತು. ಆದರೆ, ಕಾಯ್ದೆಯೆಂದರೆ ಕಾಯ್ದೆಯೇ. ಸಂವಿಧಾನಬದ್ಧ ಸಂಸ್ಥೆಯನ್ನು ಅಥವಾ ಮಾರ್ಗವನ್ನು ಬೈಪಾಸ್ ಮಾಡುವುದಕ್ಕೆ ರಾಜಕೀಯ ಅನನುಕೂಲವೆಂಬುದು ನೆಪವಾಗುವುದಕ್ಕೆ ಸಾಧ್ಯವಿಲ್ಲ. ೨೦೧೦ರಲ್ಲಿ ತಯಾರಿಸಿದ ಕರಡು ಬಿಎಂಆರ್‌ಜಿಎ ಮಸೂದೆಯ ಪ್ರತಿಯನ್ನು ಲಗತ್ತಿಸಲಾಗಿದೆ ***(ಅಡಕ ಬಿ)***

ಸರ್ಕಾರಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಇರುವ ಉತ್ತರದಾಯಿತ್ವ ಎಂಬ ಮೂಲಭೂತ ತತ್ವ ಬೆಂಗಳೂರಿನಲ್ಲಿ ಕಾಣಿಸುತ್ತಿಲ್ಲ. ಸರ್ಕಾರಿ ಕಾಮಗಾರಿಗಳ ವೇಳೆ ನಿರ್ಲಕ್ಷ್ಯದಿಂದ ಸಂಭವಿಸುವ ಸಾವೇ ಇರಲಿ ಅಥವಾ ನಿರ್ಲಕ್ಷ್ಯದಿಂದ ಜನಜೀವನ ಅಸ್ತವ್ಯಸ್ತಗೊಂಡು ಸಂಭವಿಸುವ ಮರಣವೇ ಆಗಿರಲಿ ಅಥವಾ ಭೂಮಿ, ಕೆರೆ, ರಾಜಾಕಾಲುವೆ ಮುಂತಾದ ಸರ್ಕಾರಿ ಆಸ್ತಿಗಳ ಒತ್ತುವರಿಯೇ ಆಗಿರಲಿ ಯಾವುದರಲ್ಲೂ ಉತ್ತರದಾಯಿತ್ವ ಇಲ್ಲ. ಯಾವುದೇ ವಿಷಯದಲ್ಲೂ ಸರ್ಕಾರಿ ಅಧಿಕಾರಿಗಳಿಗೆ ಉತ್ತರದಾಯಿತ್ವ ಎಂಬುದು ಕಡ್ಡಾಯವಾಗಿರಬೇಕು ಮತ್ತು ಅದು ಪಾಲನೆಯಾಗುವಂತೆ ಕಾಯ್ದೆಯು ಖಾತ್ರಿಪಡಿಸಬೇಕು.

**೪. ನಗರ ಹಾಗೂ ಅದರಲ್ಲಿರುವ ವಿವಿಧ ಸರ್ಕಾರಿ ಸಂಸ್ಥೆಗಳು ಯಾವ ರೀತಿ ಕಾರ್ಯನಿರ್ವಹಿಸಬೇಕು ಎಂಬ ಆಳವಾದ ಆಡಳಿತ ಸುಧಾರಣೆಗಳನ್ನು ಆರ್‌ಎಂಪಿ ಹೊಂದಿರಬೇಕು**

ಒಂದು ನಗರವಾಗಿ ಬೆಂಗಳೂರು ಕರ್ನಾಟಕ ರಾಜ್ಯ ಹಾಗೂ ಭಾರತದ ಆರ್ಥಿಕತೆಯ ಎಂಜಿನ್ ಆಗಿದೆ. ಬೆಂಗಳೂರಿನ ಆಡಳಿತ ಮಾದರಿ ಸದ್ಯ ಪಾರದರ್ಶಕತೆ ಕೊರತೆಯಿಂದ ಕೂಡಿದ್ದು, ಭ್ರಷ್ಟಾಚಾರ ತಾಂಡವವಾಡುತ್ತಿದೆ. ದೀರ್ಘಾವಧಿಯಲ್ಲಿ ಉತ್ತಮ ಆಡಳಿತದ ಕೊರತೆಯಿಂದ ಬೆಂಗಳೂರು ನಗರ, ಇಲ್ಲಿರುವ ಜನರು ಹಾಗೂ ಇಡೀ ರಾಜ್ಯಕ್ಕೇ ಸರಿಪಡಿಸಲಾಗದಷ್ಟು ಹಾನಿಯುಂಟಾಗುತ್ತದೆ. ಹಾನಿಯನ್ನು ದುರಸ್ತಿಪಡಿಸಲು ಭಾರಿ ಪ್ರಮಾಣದ ಹಣ ಖರ್ಚಾಗಲಿದ್ದು, ಬೆಂಗಳೂರಿನ ಭವಿಷ್ಯದ ಪೀಳಿಗೆಯ ಮೇಲೆ ಹೊರೆ ಬೀಳುತ್ತದೆ. ಹೀಗಾಗಿ ಅದಕ್ಕೆಲ್ಲಾ ಉತ್ತರ ಈಗಲೇ ಉತ್ತಮ ಆಡಳಿತ ಕೊಡುವುದು.

ಸಾರ್ವಜನಿಕ ಹಣವನ್ನು ಯಾವ ರೀತಿ ವೆಚ್ಚ ಮಾಡಬೇಕು, ಗುತ್ತಿಗೆಗಳನ್ನು ಯಾವ ರೀತಿ ಮಂಜೂರು ಮಾಡಬೇಕು ಎಂಬ ಬಗ್ಗೆ ಆಡಳಿತ ಸುಧಾರಣೆ ಅಗತ್ಯವಿದೆ. ಮತ್ತೊಂದೆಡೆ, ವಾರ್ಡ್ ಸಮಿತಿಗಳು ಹಾಗೂ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ನಾಗರಿಕರ ಭಾಗವಹಿಸುವಿಕೆ ಕುರಿತಂತೆ ಬದಲಾವಣೆಗಳನ್ನು ತರಬೇಕಾಗಿದೆ. ಒಟ್ಟಾರೆ ಆಡಳಿತ ಸುಧಾರಣೆ ಎಂಬ ಈ ವಿಚಾರವಾಗಿ ವಿಸ್ತೃತ ಹಾಗೂ ಪಾರದರ್ಶಕ ಚರ್ಚೆಯ ಅಗತ್ಯವಿದೆ.

ಅಬೈಡ್ ಹಾಗೂ ಪ್ಲಾನ್‌ಬೆಂಗಳೂರು೨೦೨೦ (ಪಿಬಿ೨೦೨೦) ರಂತಹ ಹಿಂದಿನ ವರದಿಗಳಿಂದ ಕೆಲವೊಂದು ಆಲೋಚನೆಗಳನ್ನು ಬಿಡಿಎ ಸಿದ್ಧಪಡಿಸಿರುವ ಆರ್‌ಎಂಪಿ ಪಡೆದುಕೊಂಡಿದೆ. ಆದರೆ, ಈ ಆಲೋಚನೆಗಳನ್ನು ಜಾರಿ ಮಾಡುವ ಯಾವುದೇ ಬದ್ಧತೆ ಅಥವಾ ಕಾನೂನಿನ ಅನಿವಾರ್ಯತೆಯನ್ನು ಈ ಆರ್‌ಎಂಪಿಯಲ್ಲಿ ಉಲ್ಲೇಖಿಸಲಾಗಿಲ್ಲ. ಎಂಟು ವರ್ಷಗಳ ಹಿಂದೆಯೇ ಅಂದರೆ ೨೦೧೦ರಲ್ಲಿ ಪಿಬಿ೨೦೨೦ ಪ್ರಸ್ತಾಪ ಮಾಡಿದ್ದ ಸಾರ್ವಜನಿಕ ಭಾಗಿದಾರಿಕೆಯನ್ನು ಆರ್‌ಎಂಪಿ ನಿರ್ಲಕ್ಷ್ಯ ಮಾಡಿದೆ.

೬೦ ಸಾವಿರ ನಾಗರಿಕರಿಂದ ಮಾಹಿತಿ ಪಡೆದು ಸಿದ್ಧಪಡಿಸಲಾದ ಏಕೈಕ ಯೋಜನೆ ಪಿಬಿ೨೦೨೦. ನಾಗರಿಕ ಕೇಂದ್ರಿತ ಆಡಳಿತ, ಸಂಚಾರ ನಿರ್ವಹಣೆ ಹಾಗೂ ಸಾರಿಗೆ, ಶಿಕ್ಷಣ, ಆರೋಗ್ಯ, ನಗರ ಪ್ರದೇಶದಲ್ಲಿನ ಬಡವರು, ಪರಿಸರ ಮತ್ತು ಸುಸ್ಥಿರತೆ, ಕೆರೆ ಹಾಗೂ ಜಲಮೂಲ, ತ್ಯಾಜ್ಯ ನಿರ್ವಹಣೆ, ವಿದ್ಯುತ್, ಆರ್ಥಿಕತೆ, ಪ್ರವಾಸೋದ್ಯಮ, ಸುಭದ್ರ ಬೆಂಗಳೂರು, ಪರಂಪರೆ ಹಾಗೂ ನಗರ ಸೌಲಭ್ಯ ಸೇರಿದಂತೆ ಯೋಜನೆ ಅಭಿವೃದ್ಧಿಯ ಎಲ್ಲ ಅಂಶಗಳಿಗೂ ಪಿಬಿ೨೦೨೦ ಉತ್ತರ ಹುಡುಕಿತ್ತು.

ಪ್ಲಾನ್‌ಬೆಂಗಳೂರು೨೦೨೦ಯ ಮೂಲಭೂತ ಉದ್ದೇಶ ಮೂರುಪಟ್ಟು ಇತ್ತು. ಒಂದು ನಿರ್ದಿಷ್ಟ ವಲಯದ ಭವಿಷ್ಯದ ಪ್ರಗತಿ ಹಾಗೂ ಭವಿಷ್ಯ, ಸಂಸ್ಕೃತಿ, ಆರ್ಥಿಕ ಅಗತ್ಯತೆ ಸೇರಿದಂತೆ ಪ್ರಗತಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಪರಿಹರಿಸುವ ಸಮಗ್ರ ವಲಯವಾರು ಯೋಜನೆ ಸೃಷ್ಟಿಸುವ ಉದ್ದೇಶವಿತ್ತು. ಅಂತಹ ಯೋಜನೆಗೆ ಸಂವೇದನಾಶೀಲ ಆಡಳಿತ ಅಭಿವೃದ್ಧಿಪಡಿಸುವ ಮಾರ್ಗಸೂಚಿ ಹಾಗೂ ನಿರಂತರವಾಗಿ ಅದನ್ನು ಸುಧಾರಣೆ ಮಾಡುವುದು; ಹಾಗೂ ಈ ಬದಲಾವಣೆಯಲ್ಲಿ ನಾಗರಿಕರು ಪ್ರಾಥಮಿಕ ಷೇರುದಾರರಾಗಿರುವಂತೆ ನೋಡಿಕೊಳ್ಳುವ ಅಂಶಗಳು ಇದ್ದವು. ಈ ಉದ್ದೇಶಗಳು ಈಡೇರಿಕೆಯಾದರೆ, ಭಾರತದಲ್ಲಿ ಒಂದು ಪ್ರಧಾನ ನಗರವನ್ನು ಸೃಷ್ಟಿಸಬಹುದು. ವಿಶ್ವದಲ್ಲಿ ಹೆಚ್ಚು ಇಷ್ಟವಾಗುವ ನಗರಗಳಿಗೆ ಸರಿಸಮನಾದ ಜಾಗತಿಕ ಮೆಟ್ರೋಪೊಲಿಸ್ ನಗರವನ್ನು ರೂಪಿಸಬಹುದು.

೨೦೧೦ರ ಪ್ಲಾನ್‌ಬೆಂಗಳೂರು೨೦೨೦ರ ಮುನ್ನುಡಿಯಲ್ಲಿ ನಾನು ಪ್ರಮುಖವಾಗಿ ಪ್ರಸ್ತಾಪ ಮಾಡಿದಂತೆ, ನಮ್ಮ ನಗರದ ಆಡಳಿತಕ್ಕೆ ನಾಗರಿಕ ಕೇಂದ್ರಿತ ಆಡಳಿತ ಪ್ರಮುಖ ಅಡಿಪಾಯವಾಗಬೇಕು. ನಾನು ಅಂದು ಪ್ರಸ್ತಾಪಿಸಿದ್ದ ಕೆಳಗಿನ ಅಂಶಗಳು ಇವತ್ತಿಗೂ ಪ್ರಸ್ತುತ.

*ನಗರ ಹಾಗೂ ವಲಯದ ವ್ಯವಸ್ಥಿತ ಪ್ರಗತಿಗೆ ಯೋಜನೆ ರೂಪಿಸುವಾಗ ನಮಗೆ ನೆರೆಹೊರೆಯ ಜೀವನದ ವಿವಿಧ ಆಯಾಮಗಳಲ್ಲಿ ನಾಗರಿಕರ ಪಾಲುಗೊಳ್ಳುವಿಕೆ ಹಾಗೂ ಪಾರದರ್ಶಕತೆ ಮೇಲೆ ಗಮನ ಹೊಂದಿರುವ ಆಡಳಿತ ಸುಧಾರಣೆಗಳೂ ಬೇಕಾಗುತ್ತವೆ. ಪ್ರತಿ ಯಶಸ್ವಿ ಆಧುನಿಕ ನಗರದಲ್ಲೂ, ತಮ್ಮ ಮನೆ ಹಾಗೂ ಉದ್ಯೋಗ ಸ್ಥಳದ ಸುತ್ತಲಿನ ಅಭಿವೃದ್ಧಿಯ ದಿಕ್ಕು ಹಾಗೂ ಭವಿಷ್ಯದಲ್ಲಿ ನಾಗರಿಕರು ಅತ್ಯಂತ ಪ್ರಬಲ ದನಿ ಹೊಂದಿರುತ್ತಾರೆ. ಬೆಂಗಳೂರಿಗೂ ಅದು ಬೇಕು.*

*ಉತ್ತಮ ವಾಸಯೋಗ್ಯ ವಸತಿ ಬಡಾವಣೆಗಳಿಗೆ ಸಂಬಂಧಿಸಿದಂತೆ ಬೆಂಗಳೂರಿಗೆ ದೀರ್ಘ ಇತಿಹಾಸವಿದೆ. ಆದರೆ ಸುರಕ್ಷಿತ ಹಾಗೂ ಆಕರ್ಷಕ ನಗರಿ ಎಂಬ ಭಾವನೆ ಈಗ ಅಪಾಯದಲ್ಲಿದೆ. ಪ್ರಮುಖ ವಿಚಾರಗಳು ಹಾಗೂ ಸವಾಲಿನಲ್ಲಿ ಸಮುದಾಯ ಸಹಭಾಗಿತ್ವವನ್ನು ಉತ್ತೇಜಿಸುವ ಮೂಲಕ, ನಾಗರಿಕರು ವ್ಯಕ್ತಪಡಿಸುವ ಆದ್ಯತೆಗಳನ್ನು ಆಧರಿಸಿ ನಗರವನ್ನು ಅಭಿವೃದ್ಧಿಪಡಿಸುವ ಮೂಲಕ ಹಿಂದಿನ ಸ್ಥಿತಿಯನ್ನು ಮರುಸ್ಥಾಪಿಸುವ ಆಶಾವಾದವನ್ನು ನಾವು ಇಟ್ಟುಕೊಳ್ಳಬಹುದು. ಸಮುದಾಯ ಎಂಬ ಭಾವವನ್ನು ಸೃಷ್ಟಿಸಿ, ಪೋಷಿಸಿದರೆ ಹಲವಾರು ಲಾಭಗಳು ಇವೆ. ನಮಗೆ ಸೇರಿದ್ದು ಎಂಬ ಭಾವನೆ, ಸಂಕೀರ್ಣ ಸಮಸ್ಯೆಗಳ ನಿರ್ವಹಣೆಗೆ ನೆರವಾಗುತ್ತದೆ. ಇದರಿಂದ ಬಹುಮುಖ ಕನಸುಗಳನ್ನು ಕಾಣುವುದರ ಜತೆಗೆ ಸುರಕ್ಷತೆ ಹಾಗೂ ಭದ್ರತೆಯ ಭಾವ ಮೂಡುತ್ತದೆ.*

*ಮತ್ತೊಂದು ಕಳವಳಕಾರಿ ಅಂಶವೆಂದರೆ, ವಿವಿಧ ನಗರ ಆಡಳಿತ ಸಂಸ್ಥೆಗಳು ಕುಸಿತ ಅನುಭವಿಸುತ್ತಿವೆ. ಅಭಿವೃದ್ಧಿಯ ಸವಾಲುಗಳಿಗೆ ಹೊಂದಿಕೊಳ್ಳಲು ಅವು ವಿಫಲವಾಗುತ್ತಿವೆ. ವಿವಿಧ ಯೋಜನೆ ಹಾಗೂ ಆಡಳಿತ ಕೆಲಸಗಳ ನಿರ್ವಹಣೆಗೆ ಕೌಶಲ್ಯ ಹಾಗೂ ಸಾರ್ವಜನಿಕ ಸಂಸ್ಥೆಗಳ ಸಾಮರ್ಥ್ಯ ಸುಧಾರಿಸಲು ನಿರಂತರ ಗಮನ ಬೇಕಾಗುತ್ತದೆ. ಈ ವಿಚಾರದಲ್ಲಿ ಬೆಂಗಳೂರು (ದೇಶದ ಇತರೆ ನಗರಗಳಂತೆಯೇ) ಅತ್ಯಂತ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿಲ್ಲ. ಆಧುನಿಕ- ಅಭಿವೃದ್ಧಿ ಹೊಂದುತ್ತಿರುವ- ನಗರಕ್ಕೆ ಅದನ್ನು ನಿರ್ವಹಿಸಲು ಬೇಕಾದ ಪರಿಕರ ಹಾಗೂ ತಂತ್ರಜ್ಞಾನ ಹೊಂದಿದ ನುರಿತ ಆಡಳಿತಗಾರರ ಅಗತ್ಯವಿದೆ. ವಿಶೇಷ ನಗರ ನಿರ್ವಾಹಕರ ಪಡೆಯೊಂದನ್ನು ಅಭಿವೃದ್ಧಿಪಡಿಸುವತ್ತ ಗಮನ ಹಾಗೂ ಆಡಳಿತಾತ್ಮಕ ಕೆಲಸಗಳ ಮೂಲಕ ನಾಗರಿಕರ ಹಿತರಕ್ಷಣೆ ಮೇಲೆ ಗಮನಹರಿಸುವ ಬಲಿಷ್ಠ ಸಂಸ್ಥೆಯೊಂದರ ಅಭಿವೃದ್ಧಿ ಜರೂರಾಗಿ ಆಗಬೇಕಿದೆ.*

ಬೆಂಗಳೂರು ಬಿಕ್ಕಟ್ಟಿನಲ್ಲಿದೆ. ೧೯೯೫, ೨೦೦೫ ಹಾಗೂ ೨೦೧೫ರ ಆರ್‌ಎಂಪಿಗಳ ಹೊರತಾಗಿಯೂ, ಈ ಹಿಂದಿನ ಮಾಸ್ಟರ್ ಪ್ಲಾನ್‌ಗಳ ವೈಫಲ್ಯವನ್ನು ಪರಿಶೀಲನೆ ನಡೆಸದೇ ಇರುವುದು ಈಗಿನ ಮಾಸ್ಟರ್ ಪ್ಲಾನ್‌ನ ದೊಡ್ಡ ಲೋಪ. ಆರ್‌ಎಂಪಿ ೨೦೧೫ರ ಕೆಲವೊಂದು ಭಾಗಗಳು ಜಾರಿಯಾಗಲೇ ಇಲ್ಲ. ಅದನ್ನು ನಗರ ಯೋಜಕರು ಪರಿಶೀಲಿಸಿಲ್ಲ, ಕಾರಣಗಳನ್ನೂ ಹುಡುಕಿಲ್ಲ. ಹಿಂದಿನ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತರಬರಬಹುದಾಗಿದ್ದ ಸಂಘಟಿತ ರಚನೆಗಳನ್ನು ಪರಾಮರ್ಶೆಗೊಳಪಡಿಸಲೂ ಈಗಿನ ಆರ್‌ಎಂಪಿ ವಿಫಲವಾಗಿದೆ.

ಈ ಯೋಜನೆಯನ್ನು ಜಾರಿಗೆ ತರಲು ಸಾಂಸ್ಥಿಕ ಹಾಗೂ ಕಾನೂನಿನ ಚೌಕಟ್ಟು ಏನಿದೆ? ಆಲೋಚನೆಗಳನ್ನು ಜಾರಿ ಮಾಡುವ ಕುರಿತಂತೆ ಕರಡು ಯೋಜನೆಯಲ್ಲಿ ಯಾವುದೇ ಬದ್ಧತೆ ಅಥವಾ ಕಾನೂನಿನ ಅನಿವಾರ್ಯತೆ ಇಲ್ಲ. ಇದರ ಜತೆಗೆ ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ ಹಾಗೂ ಇತರೆ ಸಂಸ್ಥೆಗಳನ್ನು ನಿಯಂತ್ರಿಸುವ ಹಲವಾರು ಕಾಯ್ದೆಗಳನ್ನು ತಿದ್ದುಪಡಿ ಮಾಡಬೇಕಾಗಿದೆ. ಆ ತಿದ್ದುಪಡಿಗಳು ಆರ್‌ಎಂಪಿ ಜೊತೆ ಹೊಂದಾಣಿಕೆಯಾಗುವ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ.

**೫. ಅರಣ್ಯ ಪ್ರದೇಶ, ಅದರ ನಿರ್ವಹಣೆ ಮತ್ತು ಒತ್ತುವರಿಯ ಪರಿಣಾಮ ಶಿಕ್ಷಾರ್ಹವಾದುದು ಎನ್ನುವುದನ್ನು ಆರ್‌ಎಂಪಿ ಸ್ಪಷ್ಟವಾಗಿ ಸೂಚಿಸಬೇಕು.**

ಬೆಂಗಳೂರು ನಗರದ ಸುತ್ತಮುತ್ತ ಸಾವಿರಾರು ಎಕರೆ ಅರಣ್ಯ ಪ್ರದೇಶಗಳಿವೆ. ಹಲವಾರು ವರ್ಷಗಳ ಅಸಮರ್ಪಕ ಸರ್ವೆ ಮತ್ತು ದುರ್ಬಲ ಕಾನೂನು ಕ್ರಮದಿಂದಾಗಿ ಈ ಅರಣ್ಯ ಪ್ರದೇಶಗಳಿಗೆ ಧಕ್ಕೆ ಒದಗುವಂತಾಗಿದೆ. ಈ ಅರಣ್ಯ ಪ್ರದೇಶವನ್ನು ಕಾನೂನು ಮೂಲಕ ಸಂರಕ್ಷಿಸಬೇಕಾಗಿದೆ. ಈಗಾಗಲೇ ಒತ್ತುವರಿಗೊಂಡಿರುವ ರಾಜ್ಯದ ಗೋಮಾಳ, ಕೆರೆಗಳು ಮತ್ತು ಅರಣ್ಯ ಪ್ರದೇಶವನ್ನು ಎಚ್ಚರಿಕೆಯಿಂದ ಸರ್ವೆ ಮಾಡಬೇಡು, ಸಂರಕ್ಷಿಸಬೇಕು ಮತ್ತು ಒತ್ತುವರಿಯ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು.

**೬. ಆರ್‌ಎಂಪಿ ವಿಶ್ವಾಸಾರ್ಹ ಹಣಕಾಸು ಯೋಜನೆ ಹೊಂದಿರಬೇಕು ಮತ್ತು ಸಾರ್ವಜನಿಕರ, ಉದ್ಯಮದ ತೆರಿಗೆ ಹಣದ ಸಮರ್ಪಕ ಬಳಕೆಯಾಗಿದೆ ಎಂಬುದರ ಕುರಿತು ಪಾರದರ್ಶಕ ವ್ಯವಸ್ಥೆ ರೂಪಿಸಬೇಕು.**

ಬಿಡಿಎಆರ್‌ಎಂಪಿ ವಿಶ್ವಾಸಾರ್ಹ ಹಣಕಾಸು ಯೋಜನೆಯನ್ನು ರೂಪಿಸದೇ ಇದ್ದರೆ ನಂಬಿಕೆ ಕಳೆದುಕೊಳ್ಳುತ್ತದೆ. ವಿಶ್ವಾಸಾರ್ಹ ಯೋಜನೆ ಇಲ್ಲದಿದ್ದರೆ ಯಾವಾಗಲೂ ಏಕಪಕ್ಷೀಯ ಗುತ್ತಿಗೆಗಳಿಗೆ ಕಾರಣವಾಗುವ ತಥಾಕಥಿತ ಸರ್ಕಾರಿ ಖಾಸಗಿ ಸಹಭಾಗಿತ್ವಗಳು ಮಧ್ಯಪ್ರವೇಶ ಮಾಡಿ ಯೋಜನೆಯನ್ನು ಹಳಿತಪ್ಪಿಸುವ ಅಪಾಯವಿರುತ್ತದೆ. ನಗರದ ಅಭಿವೃದ್ಧಿಗೆ ರೂಪಿಸುವ ಗಟ್ಟಿಯಾದ, ಚೆನ್ನಾಗಿ ಯೋಚಿಸಿ ರೂಪಿಸಲಾದ ಯೋಜನೆಗಳು ಹಣಕಾಸುವ ಅವ್ಯವಹಾರಗಳನ್ನು ತಡೆಯುವ ವಿಮೆಯಿದ್ದಂತೆ. ಹಾಗೆಯೇ ಅವು 'ಚಿನ್ನದಲ್ಲಿ ಸುತ್ತಿದ ಯೋಜನೆ'ಗಳು ಹಾಗೂ ದಾರಿತಪ್ಪಿಸುವ ಪಿಪಿಪಿಗಳಿಂದಲೂ ಇವು ರಕ್ಷಣೆ ಒದಗಿಸುತ್ತವೆ.

ಇಂತಹ ಹಣಕಾಸು ಯೋಜನೆ ಕೈಗೆತ್ತಿಕೊಳ್ಳುವ ಯಾವುದೇ ಸಾಮರ್ಥ್ಯವಾಗಲೀ ವಿಶ್ವಾಸಾರ್ಹತೆಯಾಗಲೀ ಬಿಡಿಎಗೆ ಇಲ್ಲ. ಅದರ ಸ್ವಂತ ಹಣಕಾಸು ವ್ಯವಹಾರಗಳೇ ಪಾರದರ್ಶಕತೆಯ ಕೊರತೆ ಹೊಂದಿವೆ ಹಾಗೂ ಸಂಸ್ಥೆಯ ಹಣ ಸೋರಿಕೆಯಾಗುತ್ತಿದೆ. ಬಿಡಿಎಯ ಹಣಕಾಸು ಅವ್ಯವಹಾರಗಳಿಗೆ ಸಾಕಷ್ಟು ನಿದರ್ಶನಗಳಿದ್ದು, ಅವೆಲ್ಲವೂ ಸಾರ್ವಜನಿಕರು ಓದಲಿಕ್ಕೆ ಲಭ್ಯವಿರುತ್ತವೆ.

# ಸಾರಾಂಶ

ಕರ್ನಾಟಕ ಸರ್ಕಾರ ಬಿಡಿಎ ಆರ್‌ಎಂಪಿಗೆ (ತನ್ನ ಅಧಿಕಾರಾವಧಿಯ ಕೊನೆಯ ಘಟ್ಟದಲ್ಲಿ) ಆತುರವಾಗಿ ಒಪ್ಪಿಗೆ ನೀಡುತ್ತದೆ ಎಂಬುದರ ಬಗ್ಗೆ ನನಗೆ ಖಾತ್ರಿ ಇದೆ. ತನ್ಮೂಲಕ ಭೂಬಳಕೆ ಬದಲಾವಣೆಗಳನ್ನು ಚುನಾವಣೆಗೂ ಮೊದಲೇ ಜಾರಿಗೆ ತರಬಹುದು. ತಕ್ಷಣವೇ ಅನುಷ್ಠಾನಗೊಳಿಸಬಹುದು. ಇದರಿಂದ ಹಲವಾರು ಬಿಲ್ಡರ್‌ಗಳು ಹಾಗೂ ಭೂಮಾಲೀಕರಿಗೆ ಲಾಭವಾಗಲಿದೆ. ಯಾವುದೇ ನಾಗರಿಕ ಅಥವಾ ಪ್ರಜೆಗೆ ಒಂದಿನಿತೂ ಅನುಕೂಲವಾಗುವುದಿಲ್ಲ. ನಗರವನ್ನು ಬಾಧಿಸುತ್ತಿರುವ ಸಮಸ್ಯೆ ಹಾಗೂ ವಿಷಯಗಳಲ್ಲಿ ಕೊಂಚವೂ ಬದಲಾವಣೆ ಆಗುವುದಿಲ್ಲ.

ಹಲವಾರು ಭರವಸೆಗಳನ್ನು ನೀಡಿದರೆ, ಬಿಡಿಎ ಅಥವಾ ಕರ್ನಾಟಕ ಸರ್ಕಾರದ ಹೊಣೆಗಾರಿಕೆ ಇಲ್ಲದ ಭೂ ಬಳಕೆ ಪರಿವರ್ತನೆ ಎಂಬ ಏಕೈಕ ಉದ್ದೇಶವನ್ನು ಈಡೇರಿಸಿಕೊಳ್ಳುವ ವಿಚಾರದಿಂದ ಜನರ ಗಮನವನ್ನು ಬೇರೆಡೆ ಸೆಳೆಯಬಹುದು ಎಂಬ ಸರಳ ಕಲ್ಪನೆಯ ಆಧಾರದ ಮೇಲೆ ಸರ್ಕಾರ ಪ್ರಸ್ತಾಪಿಸಿರುವ ಬಿಡಿಎಆರ್‌ಎಂಪಿ ಇದೆ.

ದೂರದೃಷ್ಟಿಗಳ ಬುಟ್ಟಿಯ ಮೇಲಾಗುವ ಹಣಕಾಸು ಪರಿಣಾಮಗಳ ನೈಜ ಪರಾಮರ್ಶೆಯ ಕೊರತೆ ಇದರಲ್ಲಿದೆ. ಹೀಗಾಗಿ ಈ ದೂರದೃಷ್ಟಿಗಳು ದೂರದೃಷ್ಟಿಗಳಾಗಿಯೇ ಉಳಿಯುತ್ತವೆ. ರೈತರು ಹಾಗೂ ಅಭಿವೃದ್ಧಿವಂಚಿತ ಉತ್ತರ ಕರ್ನಾಟಕದಂತಹ ವಿಚಾರಗಳಿಗೆ ಹಲವಾರು ಹಣಕಾಸು ಅಗತ್ಯತೆಗಳನ್ನು ಕರ್ನಾಟಕ ಹೊಂದಿದೆ. ಹೀಗಾಗಿ ಆರ್‌ಎಂಪಿಯಲ್ಲಿನ ಮಹಾನ್ ಯೋಜನೆಗಳಿಗೆ ಕರ್ನಾಟಕ ಸರ್ಕಾರ ಹಣಕಾಸು ನೆರವು ಒದಗಿಸುತ್ತದೆ ಎಂಬುದು ಕೇವಲ ಭ್ರಮೆ. ಹೀಗಾಗಿ ಅಭಿವೃದ್ಧಿ ಹೊಂದುತ್ತಿರುವ ನಗರದ ಹಣಕಾಸು ಅಗತ್ಯಗಳನ್ನು ಆರ್‌ಎಂಪಿ ನಿರ್ಧರಿಸುವ ಬದಲಾಗಿ ಪ್ರಾಯೋಗಿಕ ಹಣಕಾಸು ಯೋಜನೆ ಹಾಗೂ ಲಭ್ಯವಿರುವ ಸಂಪನ್ಮೂಲಗಳು ಆರ್‌ಎಂಪಿಗೆ ದಾರಿ ತೋರಿಸಬೇಕು.

ಕೊನೆಯದಾಗಿ, ನಮ್ಮ ಬೆಂಗಳೂರಿನ ಕರುಣಾಜನಕ ಸ್ಥಿತಿಗೆ, ಇಲ್ಲಿ ನೆಲೆ ನಿಂತಿರುವ ಹಾಗೂ ಉದ್ಯೋಗ ಮಾಡುತ್ತಿರುವ ೧ ಕೋಟಿ ಜನರ ಬಗ್ಗೆ ಯಾವುದೇ ಕಾಳಜಿ ಇಲ್ಲದೆ ಕೆಲವೇ ಕೆಲವು ಮಂದಿ ನಗರ ಹಾಗೂ ಅದರ ಸಂಪನ್ಮೂಲಗಳನ್ನು ದುರ್ಬಳಕೆ ಮಾಡಿಕೊಳ್ಳುವ ವ್ಯಾಪಕ ಭ್ರಷ್ಟಾಚಾರ ಸಂಸ್ಕೃತಿಯೇ ಕಾರಣ. ಆಡಳಿತದ ಬಗ್ಗೆ ಗಂಭೀರ ಮರುನೋಟ, ಸರ್ಕಾರಿ ಸಂಸ್ಥೆಗಳ ನಡುವೆಯೇ ಸಮನ್ವಯ ಇಲ್ಲದೇ ಹೋದರೆ ಯಾವುದೇ ಯೋಜನೆಯಾದರೂ ವಿಫಲವಾಗುತ್ತದೆ.

ಈ ಎಲ್ಲ ಮೇಲಿನ ಅಂಶಗಳ ಆಧಾರದ ಮೇಲೆ ಈ ಕರಡು ಆರ್‌ಎಂಪಿಯನ್ನು ನಾನು ವಿರೋಧಿಸುತ್ತೇನೆ.



**ರಾಜೀವ್ ಚಂದ್ರಶೇಖರ್**

ಸಂಸತ್ ಸದಸ್ಯ

# ಪರಿಷ್ಕೃತ ಮಾಸ್ಟರ್ ಪ್ಲಾನ್ ೩೧ಕ್ಕೆ ಇನ್ನಷ್ಟು ತಕರಾರುಗಳು
# (ಹಲವು ನಾಗರಿಕರು ಮತ್ತು ನಾಗರಿಕ ಸಂಘಟನೆಗಳಿಂದ ಸಲ್ಲಿಕೆಯಾಗಿದ್ದು)

ಯೋಜನೆ ರೂಪಿಸುವಾಗ ಬಿಡಿಎ ೨೦೩೦ರಲ್ಲಿ ಬೆಂಗಳೂರಿನ ಜನಸಂಖ್ಯೆಯ ಸೂಕ್ತ ಪ್ರಮಾಣವನ್ನು ಪರಿಗಣಿಸಬೇಕಿತ್ತು. ಆದರೆ ಈ ಪರಿಷ್ಕೃತ ಮಾಸ್ಟರ್ ಪ್ಲಾನ್ (ಆರ್ಎಂಪಿ) ನಲ್ಲಿ ೨೦೩೧ಕ್ಕೆ ಬೆಂಗಳೂರಿನ ಜನಸಂಖ್ಯೆ ೨.೩ ಕೋಟಿ ಇರಲಿದೆ ಎಂದು ಅಂದಾಜಿಸಲಾಗಿದೆ. ಇದರರ್ಥ ೨೦೩೧ರವರೆಗೆ ಬೆಂಗಳೂರಿನ ಜನಸಂಖ್ಯಾ ಬೆಳವಣಿಗೆ ಗತಿ ಶೇ.೫.೬ರಷ್ಟು ಇರಲಿದೆ. ಆದರೆ ತಜ್ಞರ ವರದಿಗಳ ಪ್ರಕಾರ ೧೯೯೬ರಿಂದ ೨೦೦೬ರ ಅವಧಿಯಲ್ಲಿ ಜನಸಂಖ್ಯಾ ಬೆಳವಣಿಗೆ ಗತಿ ಶೇ.೪.೫ ಮತ್ತು ೨೦೦೬ ಹಾಗೂ ೨೦೧೬ರ ನಡುವೆ ಬೆಳವಣಿಗೆ ಗತಿ ಶೇ.೩.೮ರಷ್ಟು ಇರಲಿದೆ. ಅಂದರೆ ಬೆಳವಣಿಗೆ ಗತಿಯು ಬಿಡಿಎ ಅಂದಾಜಿಸಿದ್ದ ಏರಿಕೆಯ ಹಾದಿಯ ಬದಲಾಗಿ ಇಳಿಕೆಯ ಹಾದಿಯಲ್ಲಿದೆ. ಇದು ಜನಸಂಖ್ಯಾ ಬೆಳವಣಿಗೆ ಗತಿ ಅರಿಯುವಲ್ಲಿ ಬಿಡಿಎದ ವೈಫಲ್ಯವನ್ನು ತೋರಿಸುತ್ತದೆ, ಅದಕ್ಕಿಂತ ಹೆಚ್ಚಾಗಿ ಇಷ್ಟೊಂದು ಭಾರೀ ಪ್ರಮಾಣದಲ್ಲಿ ಜನಸಂಖ್ಯೆ ಏರಿಕೆಗೆ ಕಾರಣವಾಗುವ ಅಂಶಗಳನ್ನು ಅದು ತೋರಿಸಿಲ್ಲ.

**೧. ಭೂಮಿಯ ಬಳಕೆ (ಸಂಪುಟ ೩. ಟೇಬಲ್ ೫.೧ ಇಎಲ್ಯುನ ತಾಳೆ ಟೇಬಲ್ ೧೦.೧ರ ಪಿಎಲ್ಯು ಜೊತೆಗೆ)**

ಆರ್ಎಂಪಿ ೨೦೩೧ರಲ್ಲಿ, ಪ್ರಸ್ತುತ ಭೂಮಿ ಬಳಕೆ (ಇಎಲ್ಯು) ಮತ್ತು ಪ್ರಸ್ತಾವಿತ ಭೂಮಿ ಬಳಕೆ (ಪಿಎಲ್ಯು) ನಡುವೆ ಭಾರೀ ವ್ಯತ್ಯಾಸ ಇರುವುದನ್ನು ಕಾಣಬಹುದು.

ಎ. ಭಾರೀ ಜನಸಂಖ್ಯಾ ಬೆಳವಣಿಗೆಗೆ ಜಾಗ ಮಾಡಿಕೊಡುವ ನಿಟ್ಟಿನಲ್ಲಿ ಪಿಎಲ್ಯು ಪ್ರಮಾಣವನ್ನು ೮೦ ಚ.ಕಿ.ಮೀನಷ್ಟು ಹೆಚ್ಚಿಸಲಾಗಿದೆ. ಆದರೆ ಹೀಗೆ ಹೆಚ್ಚಿಸಲಾದ ಪಿಎಲ್ಯು ಪ್ರಮಾಣದಷ್ಟು ಜಾಗವನ್ನು ಎಲ್ಲಿಂದ ಪಡೆಯಲಾಗುವುದು ಎಂಬುದನ್ನು ಬಿಡಿಎ ಹೇಳಿಲ್ಲ.

ಬಿ. ಇಎಲ್ಯುದಲ್ಲಿ ವಾಣಿಜ್ಯ ವಲಯದ ಪ್ರಮಾಣ ೩೮.೨೮ ಚ.ಕಿ.ಮೀ (ಟೇಬಲ್ ೫.೧). ಆದರೆ ಪಿಎಲ್ಯು (ಟೇಬಲ್ ೧೦.೧) ದಲ್ಲಿ ಈ ಪ್ರಮಾಣವನ್ನು ೨೪.೬೪ ಚ.ಕ.ಮೀಗೆ ಇಳಿಸಲಾಗಿದೆ. ಜನಸಂಖ್ಯಾ ಬೆಳವಣಿಗೆ ಗತಿ ಏರಿಕೆಯನ್ನು ಗಮನಿಸಿದಾಗ, ವಾಣಿಜ್ಯ ಉದ್ದೇಶದ ಜಾಗದ ಪ್ರಮಾಣ ಇಳಿಕೆ ಮಾಡುವುದು ಕಾರ್ಯಸಾಧುವಲ್ಲ.

ಸಿ. ಮುಂದುವರೆದು, ಇಎಲ್ಯುದಲ್ಲಿ ಅರಣ್ಯ ಪ್ರದೇಶವನ್ನು ೨೬.೫೩ ಚ.ಕಿ.ಮೀ ಎಂದು ತೋರಿಸಿದ್ದರೆ, ಪಿಎಲ್ಯುದಲ್ಲಿ ಕೇವಲ ೫.೬ ಚ.ಕಿ.ಮೀ ಜಾಗವನ್ನು ಅರಣ್ಯವೆಂದು ತೋರಿಸಲಾಗಿದೆ. ಅರಣ್ಯ ಪ್ರದೇಶ, ಅರಣ್ಯ ಇಲಾಖೆ ವಶದಲ್ಲಿರುವಾಗ, ನಗರವು ಹಸಿರು ಪ್ರದೇಶವನ್ನು ಕಳೆದುಕೊಳ್ಳುತ್ತಿರುವ ಆತಂಕದಲ್ಲಿ ಇರುವಾಗ ಮತ್ತು ವಾಯುಮಾಲಿನ್ಯ ಪ್ರಮಾಣ ಹೆಚ್ಚುತ್ತಿರುವಾಗ, ಅರಣ್ಯ ಪ್ರದೇಶವನ್ನು ಇಳಿಸುವ ಪ್ರಸ್ತಾಪವನ್ನು ಹೇಗೆ ಸಮರ್ಥಿಸಿಕೊಳ್ಳಲಾದೀತು. ಮೊದಲು ಸರ್ಕಾರ ಅರಣ್ಯ ಭೂಮಿಯನ್ನು ಡಿನೋಟಿಫೈ ಮಾಡಬೇಕು. ಅದರ ನಂತರವಷ್ಟೇ ಆ ಜಾಗಕ್ಕಿರುವ ಅರಣ್ಯ ಭೂಮಿಯ ಪಟ್ಟವನ್ನು ತೆಗೆಯಬಹುದು.

ಡಿ. ಆರ್ಎಂಪಿಯ ನಕ್ಷೆಗಳಲ್ಲಿ ಹಲವು ದೋಷಗಳಿವೆ. ಹಲವು ಬೀದಿಗಳು, ಕೆರೆಗಳು, ಸಿಎ ಸೈಟ್‌ಗಳು ಮತ್ತು ಪಾರ್ಕ್‌ಗಳು ನಕ್ಷೆಯಿಂದ ನಾಪತ್ತೆಯಾಗಿವೆ. ಪ್ರಸ್ತಾವಿತ ವರದಿಯಲ್ಲಿ ಇಂಥ ಮಹತ್ವದ ಅಂಶಗಳು ಕಾಣೆಯಾಗಿದ್ದೇಕೆ ಎಂಬುದಕ್ಕೆ ಯಾವುದೇ ವಿವರಣೆ ನೀಡಲಾಗಿಲ್ಲ. ಪ್ರಸ್ತಾವಿತ ವರದಿಯಲ್ಲಿ ಬೆಳ್ಳಂದೂರು- ಹರಳೂರುನ ಭೂಮಿ ಬಳಕೆಯ ವಿಶ್ಲೇಷಣೆ ಅನ್ವಯ, ಅಭಿವೃದ್ಧಿಗೆ

ಲಭ್ಯವಿರುವ ೯,೫೫೫ ಎಕರೆ ಭೂಮಿಯ ಪೈಕಿ ೯೦೯ ಎಕರೆ ಜಲಮೂಲಗಳು, ಇನ್ನು ೧೦೩೦ ಎಕರೆ ಬಫರ್‌ಜೋನ್ ಎಂದು ಕಾಯ್ದಿಡಲಾಗಿದೆ. ಜೊತೆಗೆ ಒಂದು ಪ್ರಸ್ತಾವಿತ ರಸ್ತೆಯು ಕಸವನಹಳ್ಳಿ ಕೆರೆಯ ಬಳಿ ಬರುವ ರಾಜಾಕಾಲುವೆಯ ಮೇಲೇ ಸಾಗುತ್ತದೆ.

ಇ. ಇಎಲ್‌ಯುದಲ್ಲಿ ಪ್ರಸ್ತಾವಿತ ೩೦೪.೮೨ ಚ.ಕಿ.ಮೀ ಖಾಲಿ ಜಾಗವನ್ನು ಪಿಎಲ್‌ಯುದಲ್ಲಿ ತೆಗೆದುಹಾಕಲಾಗಿದೆ. ಆದರೆ ಬೆಂಗಳೂರು ಎಲ್‌ಪಿಎದ ಅನ್ವಯ ಎಲ್ಲೂ ಶೇ.೨೫ರಷ್ಟು ಖಾಲಿ ಜಾಗ ಲಭ್ಯದ ಮಾಹಿತಿ ಇಲ್ಲ. ಈ ಜಾಗ ಎಲ್ಲಿದೆ ಮತ್ತು ವಿವಿಧ ಇಎಲ್‌ಯು ಮ್ಯಾಪ್‌ನ ಅನ್ವಯ ಅವುಗಳ ಪ್ರತ್ಯೇಕ ಮಾಹಿತಿಯನ್ನು ಸ್ಪಷ್ಟಪಡಿಸಬೇಕು.

## ೨. ಸಂಚಾರ ಮತ್ತು ಸಾರಿಗೆ

೨೦೩೧ಕ್ಕೆ ೨.೩ ಕೋಟಿ ಜನಸಂಖ್ಯೆ ಹೊಂದಲಿದೆ ಎಂದು ಅಂದಾಜಿಸಲಾದ, ಭಾರೀ ಜನದಟ್ಟಣೆಯ ಈ ನಗರದಲ್ಲಿ, ಬಿಡಿಎದ ಆರ್‌ಎಂಪಿ ೨೦೩೧ರ ಅನ್ವಯ, ಎರಡು ಹೊಸ ವರ್ತುಲ ರಸ್ತೆಗಳನ್ನು ನಿರ್ಮಿಸುವ ಪ್ರಸ್ತಾಪ ಮಾಡಲಾಗಿದೆ. ಈ ವಿಷಯದಲ್ಲಿ ಗಂಭೀರ ಆಕ್ಷೇಪಗಳನ್ನು ಎತ್ತಲೇ ಬೇಕಿದೆ. ಏಕೆಂದರೆ, ಈ ಹಿಂದಿನ ಆರ್‌ಎಂಪಿಯ ವರ್ತುಲ ರಸ್ತೆ ಇನ್ನೂ ಪೂರ್ಣಗೊಂಡಿಲ್ಲ. ಜೊತೆಗೆ ಈ ಯೋಜನೆಗೆಂದು ಬಿಡಿಎ ನೋಟಿಫೈ ಮಾಡಿದ್ದ ಜಾಗದಲ್ಲಿನ ಸಣ್ಣ ಮತ್ತು ಮಧ್ಯಮ ವರ್ಗದ ಕುಟುಂಬಗಳು ಇನ್ನೂ ಗೊಂದಲದಲ್ಲಿವೆ. ಜೊತೆಗೆ ೧೯೨೦ ಎಕರೆ ಭೂಮಿಯಲ್ಲಿರುವ ೮೦೦೦ ಕುಟುಂಬಗಳಿಗೆ, ಅವರ ಜಾಗವನ್ನು ನಗರದ ವಿವಿಧ ಭಾಗಗಳೊಂದಿಗೆ ಜೋಡಿಸುವ ಕುರಿತು ನೋಟಿಸ್ ನೀಡಲಾಗಿದೆ. ಆದರೆ, ಇದು ಮತ್ತೆ ನಾಗರಿಕರಿಂದ ಭೂಮಿಯನ್ನು ವಶಪಡಿಸಿಕೊಂಡು, ಅದನ್ನು ದೊಡ್ಡ ಕಂಪನಿಗಳಿಗೆ ಅಭಿವೃದ್ಧಿ ಯೋಜನೆಗಳಿಗೆ ವಹಿಸುವ ಹುನ್ನಾರವಾಗಿದೆ.

ಬೆಂಗಳೂರು ಅಭಿವೃದ್ಧಿ ಬಗ್ಗೆ, ಸೂಕ್ತ ಯೋಜನೆಯ ಮತ್ತು ಹೊಣೆಗಾರಿಕೆಯ ಕೊರತೆಯಿಂದಾಗಿ, ನಾಗರಿಕರು ಸಂಕಷ್ಟದಲ್ಲಿ ಸಿಕ್ಕಿಬೀಳುವಂತೆ ಆಗಿದೆ. ಲಕ್ಷಾಂತರ ಜನ ಈ ಸಮಸ್ಯೆ ಎದುರಿಸುತ್ತಿದ್ದಾರೆ– ರೈತರು ತಮ್ಮ ಭೂಮಿಯನ್ನು ಯಾವಾಗ ಬೇಕಾದರೂ ಸರ್ಕಾರ ವಶಪಡಿಸಿಕೊಳ್ಳಬಹುದು ಎಂಬ ಭೀತಿಯಿಂದಾಗಿ ಕೃಷಿ ಚಟುವಟಿಕೆಯನ್ನೂ ನಡೆಸದೇ ಆತಂಕದಿಂದ ಜೀವನ ಸಾಗಿಸುವಂತೆ ಆಗಿದೆ.

ಯೋಜನೆಯು ೨೦೩೧ರ ವೇಳೆಗೆ ೧೫೦೦೦ ಬಸ್‌ಗಳ ಬಗ್ಗೆ ಪ್ರಸ್ತಾಪ ಮಾಡುತ್ತದೆ, ಆದರೆ ಇಷ್ಟೊಂದು ಬಸ್‌ಗಳಿಗೆ ಸ್ಥಳಾವಕಾಶ ಹೇಗೆ ಮಾಡಿಕೊಡುತ್ತದೆ ಎಂಬುದನ್ನು ಹೇಳಿಲ್ಲ. ಭೂಮಿಯ ಬಳಕೆಯು, ಬಸ್ ಒಂದು ನಡೆಸುವ ಸಂಚಾರ ಮತ್ತು ಸಂಚಾರದ ದೂರದ ಮೇಲೆ ಪರಿಣಾಮ ಬೀರುತ್ತದೆ. ಜೊತೆಗೆ ಇದು ಸಂಚಾರದ ಮಾದರಿಯ ಮೇಲೂ ಪರಿಣಾಮ ಬೀರುತ್ತದೆ. ಆದರೆ ಆ ಅಂಶವನ್ನು ವರದಿಯಲ್ಲಿ ಪರಿಗಣಿಸಿಯೇ ಇಲ್ಲ. ಜೊತೆಗೆ ವರದಿಯಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದ ಜನರಿಗೆ ಸಂಚಾರ ವ್ಯವಸ್ಥೆಯ ಲಭ್ಯತೆ ಮತ್ತು ಸಂಚಾರ ವ್ಯವಸ್ಥೆಯ ಸಾಧ್ಯತೆಯ ಬಗ್ಗೆ ಪರಿಗಣನೆಯನ್ನೇ ಮಾಡಿಲ್ಲ. ಬಿಎಂಟಿಸಿ ದರ ಹೆಚ್ಚಳ ಮತ್ತು ಮೆಟ್ರೋ ಸೇವೆ ಅಲಭ್ಯತೆ ಬಗ್ಗೆ ಸಾಕಷ್ಟು ಪ್ರತಿಭಟನೆ ಹೊರತಾಗಿಯೂ ಬಿಡಿಎ ವರದಿಯಲ್ಲಿ ಈ ಅಂಶವನ್ನು ಕಡೆಗಣಿಸಲಾಗಿದೆ.

## ೩. ನೀರು ಮತ್ತು ನೈರ್ಮಲ್ಯ

೨೦೩೧ರಲ್ಲಿ ನಗರದ ಜನಸಂಖ್ಯೆ ೨.೩ ಕೋಟಿ ತಲುಪಲಿದ್ದು, ಈ ವೇಳೆ ನೀರಿನ ಸಮಸ್ಯೆಯು ಕರಡು ಆರ್‌ಎಂಪಿ ೨೦೩೧ರಲ್ಲಿ ಊಹಿಸಿದ್ದಕ್ಕಿಂತ ಗಂಭೀರವಾಗಿರಲಿದೆ. ನಗರಕ್ಕೆ ಪ್ರತಿನಿತ್ಯ ಬೇಕಾದ ೫೩೪೦ ದಶಲಕ್ಷ ಲೀಟರ್ ನೀರನ್ನು ನಗರದಿಂದ ಸಾಕಷ್ಟು ದೂರದಲ್ಲಿ ಇರುವ ಜಲ ಸಂಗ್ರಹಾಗಾರಗಳಾದ ಎತ್ತಿನಹೊಳೆ, ಲಿಂಗನಮಕ್ಕಿ ಮತ್ತು ಹೇಮಾವತಿಯಿಂದ ಪೂರೈಕೆ ಮಾಡುವ ಬಗ್ಗೆ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಇದು ಪ್ರಾಯೋಗಿಕವಾಗಿ ಕಾರ್ಯಸಾಧುವಲ್ಲದ ಮತ್ತು ಅಂತರ್ಜಲವನ್ನು ಹಾಳುಮಾಡಬಲ್ಲಂಥ ಯೋಜನೆ. ಜೊತೆಗೆ ಕರಡು ವರದಿಯು, ಹೆಚ್ಚಾಗುವ ಬೇಡಿಕೆಯನ್ನು, ನೀರನ್ನು

ಮರುಸಂಸ್ಕರಿಸಿ ಪೂರೈಸುವ ಪ್ರಸ್ತಾಪ ಮಾಡಿದೆ, ಆದರೆ ಇಡೀ ಯೋಜನೆಯಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಕೊಳಚೆ ನೀರು ಶುದ್ದೀಕರಣ ಘಟಕ (ಎಸ್‌ಟಿಪಿ) ಸ್ಥಾಪಿಸುವ ಬಗ್ಗೆ ಮೌನ ವಹಿಸಿದೆ.

ಹಲವು ಅಪಾರ್ಟ್‌ಮೆಂಟ್‌ಗಳು ಮತ್ತು ವಾಣಿಜ್ಯ ಕಟ್ಟಡಗಳು ಎಸ್‌ಟಿಪಿಗಳನ್ನು ಹೊಂದಿಲ್ಲ, ಪರಿಣಾಮ ಬಹುತೇಕ ಕೆರೆಗಳು ಮತ್ತು ಜಲಮೂಲಗಳು ಗಂಭೀರ ಪ್ರಮಾಣದ ಮಾಲಿನ್ಯಕ್ಕೆ ತುತ್ತಾಗಿವೆ. ಈ ನಡುವೆಯೇ ಬಿಡಿಎ ನಗರದ ಹಲವು ಪ್ರದೇಶಗಳನ್ನು ಕಾರಿಡಾರ್ ರೋಡ್ ನಿರ್ಮಾಣಕ್ಕೆಂದು ಗುರುತಿಸಿದೆ. ಸಮಗ್ರ ಸಂಚಾರ ವ್ಯವಸ್ಥೆಗೆಂದು ಗುರುತಿಸಲಾದ ಈ ಯೋಜನೆಯಡಿ ಹಲವು ರಸ್ತೆಗಳು ಕೆರೆಗಳಿಂದ ೧೨–೧೮ ಮೀಟರ್ ಸುತ್ತಮುತ್ತಲಿನ ಪ್ರದೇಶದಲ್ಲೇ ಬರುತ್ತದೆ. ಇದು ಕೆರೆಗಳಿಂದ ೭೫ ಮೀಟರ್ ಜಾಗವನ್ನು ಬಫರ್ ಜೋನ್ ಎಂದು ಗುರುತಿಸಿ ಅಲ್ಲಿ ಯಾವುದೇ ನಿರ್ಮಾಣ ಚಟುವಟಿಕೆ ಕೈಗೊಳ್ಳದಂತೆ ಇರುವ ಎನ್‌ಜಿಟಿ ಆದೇಶವನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತದೆ. ಈ ಕರಡು ವರದಿ ತಯಾರಿಸಿರುವವರು, ಕೇವಲ ಎನ್‌ಜಿಟಿ ಆದೇಶವನ್ನು ಉಲ್ಲಂಘಿಸಿದ್ದು ಮಾತ್ರವಲ್ಲದೇ, ಬಫರ್ ಜೋನ್‌ನಲ್ಲಿ ರಸ್ತೆ ನಿರ್ಮಾಣಕ್ಕೆ ಅವಕಾಶ ಮಾಡಿಕೊಡುವ ಮೂಲಕ ಕೆರೆಗಳನ್ನು ಹಾಳುಗೆಡವುದರ ಜೊತೆಗೆ ಬೆಂಗಳೂರಿನ ನಾಗರಿಕರ ಸಮಸ್ಯೆಯನ್ನು ಹೆಚ್ಚಿಸಲು ಕಾರಣಕರ್ತರಾಗಿದ್ದಾರೆ. ಕೆರೆಗಳ ಮಾಲಿನ್ಯದಿಂದ ಆರೋಗ್ಯ ಸಮಸ್ಯೆ, ಕುಡಿಯುವ ನೀರಿನ ಕೊರತೆ, ಅಂತರ್ಜಲ ಕುಸಿತದಂಥ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ.

## ೪. ಘನ ತ್ಯಾಜ್ಯ ನಿರ್ವಹಣೆ

೨೦೩೧ರ ವೇಳೆಗೆ ಘನತ್ಯಾಜ್ಯ ನಿರ್ವಹಣೆಗೆ ವಿಕೇಂದ್ರಿಕೃತ ವ್ಯವಸ್ಥೆಯ ಬಗ್ಗೆ ವರದಿಯಲ್ಲಿ ಪ್ರಸ್ತಾಪ ಮಾಡಲಾಗಿದೆ. ಆದರೆ, ಇತ್ತೀಚೆಗೆ ಬೆಳ್ಳಂದೂರು ಕೆರೆಗೆ ಬಿದ್ದ ಬೆಂಕಿ ಮತ್ತು ಯುನೈಟೆಡ್ ಬೆಂಗಳೂರು ನೇತೃತ್ವದಲ್ಲಿ ವಿವಿಧ ಕೆರೆ ಉಳಿಸುವ ಸಂಘಟನೆಗಳು ನಗರದ ವಿವಿಧೆಡೆ ಮಾಡಿದ ಪರಿಶೀಲನೆ ವೇಳೆ, ನಗರದ ಕೆರೆಗಳು ಹೇಗೆ ಘನತ್ಯಾಜ್ಯ ಎಸೆಯುವ ತಾಣಗಳಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಕಟ್ಟಡದ ತ್ಯಾಜ್ಯ ಸೇರಿದಂತೆ ಎಲ್ಲಾ ರೀತಿಯ ಘನತ್ಯಾಜ್ಯ ವಸ್ತುಗಳನ್ನು ಕೆರೆಗಳಿಗೆ ತಂದು ಚೆಲ್ಲಲಾಗುತ್ತಿದೆ. ಪ್ರಸಕ್ತ ನಿತ್ಯ ಉತ್ಪಾದನೆಯಾಗುತ್ತಿರುವ ೪೦೦೦ ಟನ್ ತ್ಯಾಜ್ಯ ವಸ್ತು ನಿರ್ವಹಣೆಯಲ್ಲೇ ವೈಫಲ್ಯ ಕಾಣುತ್ತಿರುವಾಗ ೨೦೩೧ರಲ್ಲಿ ನಿತ್ಯ ೧೬೧೧೧ ಟನ್ ತ್ಯಾಜ್ಯ ಉತ್ಪಾದನೆಯಾದಲ್ಲಿ, ನಗರ ಅದರಲ್ಲಿ ಮುಳುಗಿ ಹೋಗುವುದು ಖಚಿತ. ಘನ ತ್ಯಾಜ್ಯ ಗುತ್ತಿಗೆ ಎಂಬುದು ಜನಪ್ರತಿನಿಧಿಗಳು ಮತ್ತು ಗುತ್ತಿಗೆದಾರರಿಗೆ ಹಣ ತುಂಬಿಕೊಡುವ ಥಾಲಿಯಾಗಿದೆ. ಇವರು ತ್ಯಾಜ್ಯ ನಿರ್ವಹಣೆ ಹೆಸರಲ್ಲಿ ಸಾಧ್ಯವಿದ್ದಲ್ಲೆಲ್ಲಾ ಹಣ ಮಾಡುತ್ತಿದ್ದಾರೆ.

## ೫. ಕಾನೂನು ಬಾಧ್ಯತೆ ಮತ್ತು ಸಹಯೋಗಿ ಸಂಸ್ಥೆಗಳು

ಆರ್‌ಎಂಪಿ ೨೦೩೧ ವರದಿಯು, ಅರೆ ಸರ್ಕಾರಿ ಸಂಸ್ಥೆಗಳ (ಬಿಬಿಎಂಪಿ, ಬಿಎಂಆರ್‌ಸಿಎಲ್, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಟಿಸಿ, ಕೆಐಎಡಿಬಿ) ಮೂಲಕ ವಿವಿಧ ಸೇವೆಗಳು ಮತ್ತು ವಲಯವಾರು ಯೋಜನೆಗಳನ್ನು ಕಾಲಮಿತಿಯೊಳಗೆ ಪೂರೈಸುವ ಪ್ರಸ್ತಾಪ ಮಾಡಿದೆ. ಆದರೆ ಇದು ಸಾಧ್ಯವಾಗದೇ ಹೋದಲ್ಲಿ ಅವುಗಳು ಕಾನೂನಿಗೆ ಬಾಧ್ಯಸ್ಥರಾಗುವ ಯಾವುದೇ ಅಂಶ ವರದಿಯಲ್ಲಿ ಇಲ್ಲ. ಹೀಗಾದಲ್ಲಿ ಎಲ್ಲಾ ಯೋಜನೆಗಳು ಕೇವಲ ಕಾಗದದಲ್ಲಿಯೇ ಉಳಿದುಕೊಳ್ಳಲಿದೆ. ಹೀಗಾಗಿ ಇಂಥ ವಲಯವಾರು ಯೋಜನೆಗಳ ಜಾರಿ ವೇಳೆ ಅರೆ ಸರ್ಕಾರಿ ಸಂಸ್ಥೆಗಳು ಕಾನೂನು ಬಾಧ್ಯಸ್ಥವಾಗುವಂತೆ ಮಾಡಿ ಈ ಬಗ್ಗೆ ಅವುಗಳಿಂದ ಅಫಿಡವಿಟ್ ಪಡೆದು ಅದನ್ನು ೨೦೩೧ರ ಅಂತಿಮ ಆರ್‌ಎಂಪಿಯಲ್ಲಿ ಸೇರಿಸುವುದು ಅತ್ಯಗತ್ಯ.

## ೬. ಪರಂಪರೆಯ ಸಂರಕ್ಷಣೆ ಮತ್ತು ಭದ್ರತೆ

ಕರಡು ವರದಿಯಲ್ಲಿ ವಿಕಾಸಸೌಧವನ್ನು ಪಾರಂಪರಿಕ ಕಟ್ಟಡಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಸೇರಿಸಲಾಗಿದೆ. ಆದರೆ ವಿಕಾಸಸೌಧವು, ಪಾರಂಪರಿಕ ಕಟ್ಟಡವಾದ ವಿಧಾನಸೌಧದ ಪ್ರತಿರೂಪವೇ ಹೊರತೂ, ಪಾರಂಪರಿಕ ಕಟ್ಟಡವಲ್ಲ. ವಾಸ್ತವವಾಗಿ ಪಾರಂಪರಿಕ ಕಟ್ಟಡವಾದ ಸರ್ಕಾರಿ ಮುದ್ರಣಾಲಯುವನ್ನು ಕೆಡವಿ ಅಲ್ಲಿ ವಿಕಾಸಸೌಧವನ್ನು ಕಟ್ಟಲಾಗಿದೆ. ಇದನ್ನು ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅಂದರೆ ೨೦೦೪ರಲ್ಲಿ ೧೫೦ ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಕಟ್ಟಡ ೭.೫ ಎಕರೆ ಪ್ರದೇಶದಲ್ಲಿದ್ದು, ೬.೨೪ ಲಕ್ಷ ಚದರಡಿ ನಿರ್ಮಿತಿ ಪ್ರದೇಶ ಹೊಂದಿದೆ. ಆರ್‌ಎಂಪಿ ೨೦೩೧ ವರದಿ ತಯಾರಿಸಿದವರು, ಪಾರಂಪರಿಕ ಕಟ್ಟಡ ಎಂದರೆ ಏನು ಎಂಬ ತಮ್ಮ ಉಲ್ಲೇಖವನ್ನೇ ಉಲ್ಲಂಘಿಸಿ ವಿಕಾಸಸೌಧವನ್ನು ಪಾರಂಪರಿಕ ಕಟ್ಟಡ ಎಂದು ಘೋಷಿಸಿದ್ದಾರೆ. ಪಾರಂಪರಿಕ ಕಟ್ಟಡ ಎನ್ನಿಸಿಕೊಳ್ಳಬೇಕಾದರೆ ಆ ಕಟ್ಟಡವು, ಅಪರೂಪದ ವಾಸ್ತುಶಿಲ್ಪ ಹೊಂದಿರಬೇಕು, ಐತಿಹಾಸಿಕವಾಗಿರಬೇಕು ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಹೊಂದಿರಬೇಕು ಎಂದು ವರದಿಯಲ್ಲಿನ ಅಂಶಗಳು ಹೇಳುತ್ತವೆ. ಆದರೆ ಇದ್ಯಾವುದನ್ನೂ ಹೊಂದಿರದ ವಿಕಾಸಸೌಧಕ್ಕೂ ಪಾರಂಪರಿಕ ಕಟ್ಟಡದ ಸ್ಥಾನವನ್ನು ಕಲ್ಪಿಸಲಾಗಿದೆ. ವಿಧಾನಸೌಧದ ಆವರಣದಲ್ಲೇ ಬರುತ್ತದೆ ಎಂಬ ಕಾರಣಕ್ಕೆ ವಿಕಾಸಸೌಧಕ್ಕೆ ಈ ಸ್ಥಾನಮಾನ ನೀಡುವುದು ಸರಿಯಲ್ಲ. ಇದೇ ವೇಳೆ ಸರ್ಕಾರ ಪಾರಂಪರಿಕ ಕಟ್ಟಡಗಳಾದ ವಾಣಿವಿಲಾಸ ಆಸ್ಪತ್ರೆಯಂಥ ಕಟ್ಟಡಗಳ ಬಗ್ಗೆ ಕುರುಡುನೋಟ ಬೀರಿರುವುದು ಆಕ್ಷೇಪಾರ್ಹ. ಇತ್ತೀಚೆಗೆ ಲಾಲ್‌ಭಾಗ್ ಆವರಣದಲ್ಲಿನ ಕ್ರುಂಬಿಗೆಲ್ ಹಾಲ್ ಅನ್ನು ಧ್ವಂಸಗೊಳಿಸಿದ ವಿಷಯವು, ಪಾರಂಪರಿಕ ಕಟ್ಟಡಗಳ ಬಗ್ಗೆ ಸರ್ಕಾರ ಇನ್ನಷ್ಟು ಗಂಭೀರವಾಗಬೇಕಾದ ಅಗತ್ಯವಿದೆ ಜೊತೆಗೆ ಇಂಥ ಕೆಲಸ ಮಾಡುವ ಸಂಸ್ಥೆಗಳನ್ನು ಬಲಪಡಿಸಬೇಕಾದ ಅಗತ್ಯವಿದೆ ಎಂಬುದನ್ನು ಪ್ರತಿಪಾದಿಸುತ್ತದೆ.

ಎ. ಪಾರಂಪರಿಕ ಸಮಿತಿಯು, ಸಮಾನ ಪ್ರಮಾಣದಲ್ಲಿ ನಾಗರಿಕ ಪ್ರತಿನಿಧಿಗಳನ್ನು ಒಳಗೊಂಡಿರಬೇಕು. ಸಮಿತಿಯ ಒಟ್ಟು ಸದಸ್ಯರ ಸಂಖ್ಯೆಯನ್ನು ೧೨ಕ್ಕೆ ಹೆಚ್ಚಿಸಬೇಕು ಮತ್ತು ಇದರಲ್ಲಿ ಅಧಿಕಾರಿಗಳು ಮತ್ತು ನಾಗರಿಕರಿಗೆ ಸಮಾನ ಅವಕಾಶ ಕಲ್ಪಿಸಬೇಕು.

ಬಿ. ಸಮಿತಿಯ ಸದಸ್ಯರಾಗಿರುವವರು, ಪಾರಂಪರಿಕ ಸಮಿತಿಯ ವ್ಯಾಪ್ತಿಯಲ್ಲಿ ಬರುವ ಯಾವುದೇ ಖಾಸಗಿ ವಾಣಿಜ್ಯ ಹಿತಾಸಕ್ತಿಗಳನ್ನು ಹೊಂದಿರಬಾರದು. ಒಂದು ಪಕ್ಷ ಹಾಗೆ ಹೊಂದಿದ್ದೇ ಆದಲ್ಲಿ ಆತ/ ಆಕೆ ಸಮಿತಿ ಮತ್ತು ಅದರ ಕಾರ್ಯಚಟುವಟಿಕೆಯಿಂದ ಹಿಂದೆ ಸರಿಯಬೇಕು.